ಪದತ್ರಯ

# ಕನ್ನಡ ಮೊದಲನೆ ವ್ಯಾಕರಣ

ಮತ್ತು

ಕರ್ಣಾಟಕ

# ವಾಕ್ಯರಚನಾಕ್ರಮ



ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು


ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ – 573211

ದೂರವಾಣಿ : 08175 – 273820

Visit us @ www.adhyatmaprakasha.org

2007

# ಪದತ್ರಯ

## ಕನ್ನಡ ಮೊದಲನೆ ವ್ಯಾಕರಣ

ಮತ್ತು

ಕರ್ಣಾಟಕ

# ವಾಕ್ಯರಚನಾಕ್ರಮ

ಲೇಖಕರು

**ವೈ. ಸುಬ್ಬರಾವ್**

(ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಪೂರ್ವಾಶ್ರಮದ ಹೆಸರು)

**ಕ್ರಮಾಂಕ 232 – 233**

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**

ಹೊಳೆನರಸೀಪುರ–ಹಾಸನಜಿಲ್ಲೆ: 573211

ದೂ: 08175-273820

www.adhyatmaprakasha.org

**2007**

ಪದತ್ರಯ (ವ್ಯಾಕರಣ): ಹತ್ತನೆಯ ಮುದ್ರಣ - 2007
ವಾಕ್ಯರಚನಾಕ್ರಮ: ಹತ್ತೊಂಬತ್ತನೆಯ ಮುದ್ರಣ - 2007 } 1000 ಪ್ರತಿಗಳು

ಪುಟಗಳು
**ಪದತ್ರಯ: 6 + 42 = 48**
**ವಾಕ್ಯರಚನಾಕ್ರಮ: 10 + 102 = 112**

**ಬೆಲೆ: ರೂ. 40**

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ
**ಶ್ರೀರಂಗ ಡಿಜಿಟಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಪ್ರೈ. ಲಿ.,**
ಜೈನಬಸದಿ ಹಿಂಭಾಗ, ಮೊದಲನೆಯ ಕ್ರಾಸ್,
ರಂಗನಾಥ ನಗರ
ಶ್ರೀರಂಗಪಟ್ಟಣ: 571438
**ದೂ: 08236-292432**
http://www.srirangadigital.com

ಮುದ್ರಣಕಾರರು:
**ಸ್ಟ್ಯಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ, ಶಂಕರಪುರಮ್
ಬೆಂಗಳೂರು-560004
**ದೂ: 080-22421527**

# ಪದತ್ರಯ

ಚಿಕ್ಕವರಿಗೆ ತಿಳಿಸಬೇಕಾದ ಕ್ರಮವನ್ನು ಹಿಡಿದು
ಅಭ್ಯಾಸಸಹಿತವಾಗಿ ರಚಿಸಿರುವ

# ಕನ್ನಡ ಮೊದಲನೆಯ ವ್ಯಾಕರಣ

ಲೇಖಕರು

ವೈ. ಸುಬ್ಬರಾವ್

(ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಪೂರ್ವಾಶ್ರಮದ ಹೆಸರು)

ಕ್ರಮಾಂಕ 232

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ–ಹಾಸನಜಿಲ್ಲೆ: 573211

ದೂ: 08175-273820

www.adhyatmaprakasha.org

2007

ಮೊದಲನೆಯ ಮುದ್ರಣ: 1916
ತಿದ್ದಿದ ಒಂಭತ್ತನೆಯ ಮುದ್ರಣ: 1925
ಹತ್ತನೆಯ ಮುದ್ರಣ: 2007 — 1000 ಪ್ರತಿಗಳು

ಪುಟಗಳು: 6 + 42 = 48

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು
**All Rights Reserved.**

ಅಕ್ಷರ ಜೋಡಣೆ
**ಶ್ರೀರಂಗ ಡಿಜಿಟಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಪ್ರೈ. ಲಿ.,**
ಜೈನಬಸದಿ ಹಿಂಭಾಗ, ಮೊದಲನೆಯ ಕ್ರಾಸ್,
ರಂಗನಾಥ ನಗರ
ಶ್ರೀರಂಗಪಟ್ಟಣ: 571438
**ದೂ: 08236-292432**
http://www.srirangadigital.com

ಮುದ್ರಣಕಾರರು:
**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ, ಶಂಕರಪುರಮ್
ಬೆಂಗಳೂರು-560004
**ದೂ: 080-22421527**

## ಒಂದನೆಯ ಮುದ್ರಣದ ಪೀಠಿಕೆಯಿಂದ ಆರಿಸಿದ ಭಾಗ.

ಪಾಶ್ಚಾತ್ಯರ ಈಚೀಚಿನ ಪಾಠಕ್ರಮಗಳ ಆಧಾರದಿಂದ ನಮ್ಮ ಭಾಷೆಗೆ ಹೊಂದುವ ಕ್ರಮವನ್ನು ಕಲ್ಪಿಸಿಕೊಂಡು ಬರೆದಿರುವ ಇದರ ಸೌಕರ್ಯವಿಶೇಷಗಳೇನೆಂದರೆ:-

(೧) ಪಾಠವನ್ನು ಹೇಳುವುದಕ್ಕೆ ಹೊರಟಿರುವಾಗ ಬೋಧಕರು ಹುಡುಕಬೇಕಾಗದಂತೆ ಈಗಿನ ಕ್ರಮದಲ್ಲಿ ಪಾಠವನ್ನು ಸಾಗಿಸುವುದಕ್ಕೆ ಬೇಕಾದ ಅನುಕೂಲತೆಗಳನ್ನು ಹೊಂದಿಸಿ ಕೊಟ್ಟಿರುವುದು.

(೨) ಒಂದೊಂದು ಪಾಠದಲ್ಲಿ ಒಂದೊಂದೇ ವಿಷಯವನ್ನು ತಿಳಿಯಹೇಳಿ, ಅದು ಗಟ್ಟಿಯಾಗುವುದಕ್ಕೆ ತಕ್ಕ ಅಭ್ಯಾಸಗಳನ್ನು ಕೊಟ್ಟಿರುವುದು.

(೩) ಒಂದು ವಿಷಯವನ್ನು ಎತ್ತಿಕೊಳ್ಳುತ್ತಲೆ ಉದ್ದಕ್ಕೆ ಅದನ್ನೇ ಸುಮ್ಮನೆ ಬೆಳೆಸುತ್ತಾ ಹೋಗದೆ ಮೊದಲು ಅದರ ಸಂಬಂಧವಾಗಿ ಕೆಲವು ಸ್ಥೂಲವಿಷಯಗಳನ್ನು ಸಂಕ್ಷೇಪವಾಗಿ ತಿಳಿಯಹೇಳಿ ಆಮೇಲೆ ಕ್ರಮಕ್ರಮವಾಗಿ ಅವುಗಳ ಸೂಕ್ಷ್ಮವಿಚಾರಗಳನ್ನು ಬೆಳೆಸುತ್ತ ಹೋಗಿರುವುದು.

(೪) ಅಭ್ಯಾಸಕ್ಕೆ ಕೊಟ್ಟಿರುವ ವಾಕ್ಯಗಳಲ್ಲಿ ತಿಳಿದ ವಿಷಯಗಳನ್ನೇ ಒಳಗೊಂಡ ಬಳಕೆಯಾದ ಮಾತುಗಳೇ ಇರುವುವು.

(೫) ವ್ಯಾಕರಣದ ಪ್ರತಿಯೊಂದು ಸಂಗತಿಯನ್ನೂ ವಾಕ್ಯದ ಆಧಾರದ ಮೇಲೆ ಹೇಳಿರುವುದು; ಮತ್ತು ವಾಕ್ಯರಚನೆಗೂ ವ್ಯಾಕರಣಕ್ಕೂ ಇರುವ ಸಮೀಪಸಂಬಂಧವು ಮನಗಾಣುವಂತೆ ಅಭ್ಯಾಸಗಳನ್ನು ಏರ್ಪಡಿಸಿರುವುದು.

(೬) ವಾಕ್ಯವಿಭಜನೆಯ ಆಧಾರದ ಮೇಲೆ ವ್ಯಾಕರಣದಲ್ಲಿ ಪದ ವಿಭಾಗವು ಹುಟ್ಟುವುದೆಂಬುದನ್ನು ಸುಲಭವಾದ ರೀತಿಯಿಂದ ತಿಳಿಸಿರುವುದು.

ಈ ಚಿಕ್ಕ ಪುಸ್ತಕವನ್ನು ಉಪಯೋಗಿಸುವಾಗ ಉಪಾಧ್ಯಾಯರು ಅನುಸರಿಸಬೇಕಾದ ಕ್ರಮವೇನೆಂದರೆ:— ಆಯಾ ಪಾಠಗಳಲ್ಲಿ ಕೊಟ್ಟಿರುವ ವಾಕ್ಯಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಬೇಕು; ಆ ವಾಕ್ಯಗಳನ್ನು ಕುರಿತು ಕೇಳಬೇಕಾದ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ತೆಗೆದುಕೊಳ್ಳಬೇಕು; ಆಮೇಲೆ ಆದಮಟ್ಟಿಗೂ ಮಕ್ಕಳಿಂದಲೇ ಆಯಾ ಸೂತ್ರವನ್ನು ಏರ್ಪಡಿಸಿ, ಬೇಕಾದ ಕಡೆ ತಿದ್ದಿ ಸರಿಯಾದ ಸೂತ್ರವನ್ನು ಹಲಗೆಯ ಮೇಲೆ ಬರೆದು,

ನಾಲ್ಕಾರು ಹುಡುಗರಿಂದ ಹೇಳಿಸಬೇಕು. ಬಳಿಕ ಪಾಠದ ಕೆಳಗೆ ಕೊಟ್ಟಿರುವ ಅಭ್ಯಾಸಗಳನ್ನು ಮಾಡಿಸಬೇಕು. ನಾಮಪದ, ಕ್ರಿಯಾಪದ, ಅವ್ಯಯ—ಎಂಬ ಮೂರು ಪದಗಳನ್ನೂ ಅವುಗಳ ಪರಸ್ಪರಾನ್ವಯವನ್ನೂ ತಿಳಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾದುದರಿಂದ ಅಭ್ಯಾಸಕ್ಕಾಗಿ ಪಾಠಪುಸ್ತಕದಿಂದ ಉದಾಹರಣೆಗಳನ್ನು ಆರಿಸಿಕೊಳ್ಳಬೇಕಾಗಿ ಬಂದರೆ ಸಾಮಾನ್ಯ ವಾಕ್ಯಗಳನ್ನೇ ಆರಿಸಬೇಕು. ಕೃದಂತಗಳ ಪ್ರಯೋಗವು ಮೊದಲು ವ್ಯಾಕರಣವನ್ನು ಓದುವವರಿಗೆ ತಿಳಿಯುವುದಕ್ಕೆ ಕಷ್ಟವಾಗುತ್ತದೆ ಎಂಬುದರ ಮೇಲೆ ಅದನ್ನು ಇಲ್ಲಿ ಸೇರಿಸಿಲ್ಲ. ಪದಗಳ ಒಳಭೇದಗಳನ್ನು ಬಿಟ್ಟಿರುವುದಕ್ಕೂ ಇದೇ ಕಾರಣ. ಪ್ರತಿಯೊಂದು ಅಭ್ಯಾಸದಲ್ಲಿಯೂ ಕೆಲ ಕೆಲವು ಉದಾಹರಣೆಗಳನ್ನು ಬರೆಸುವ ಪದ್ಧತಿ ಒಳ್ಳೆಯದು. ಹೆಚ್ಚಿಗೆಯ ಸೂಚನೆಗಳನ್ನು ಪಾಠಗಳ ಕೆಳಗೇ ಕೊಟ್ಟಿರುತ್ತದೆ.

ಪಾಠವನ್ನು ಕಲಿಸುವಾಗ ಈ ಪುಸ್ತಕದಲ್ಲಿ ಕಂಡು ಬರಬಹುದಾದ ಹೆಚ್ಚುಕುಂದುಗಳನ್ನು ಬೋಧಕರು ದಯವಿಟ್ಟು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

**1916.** **ಗ್ರಂಥಕರ್ತ.**

---

## ಒಂಭತ್ತನೆಯ ಮುದ್ರಣದ ಪೀಠಿಕೆ.

ಗ್ರಂಥದ ಪ್ರತಿಗಳೆಲ್ಲ ತೀರಿಹೋಗಿದ್ದುದರಿಂದ ಅಚ್ಚಿನ ತಪ್ಪುಗಳನ್ನು ತಿದ್ದಿ ಮತ್ತೆ ಪ್ರಕಟಿಸಿರುತ್ತದೆ.

ಬೆಂಗಳೂರು ಸಿಟಿ, **ಗ್ರಂಥಕರ್ತ.**
**10–7–1925.**

---

# ಪ್ರಕಾಶಕರ ಅರಿಕೆ

ನಿಮಿತ್ತ ಮಾತ್ರವೊಂದು ಈ ಪುಸ್ತಕಕ್ಕೆ ಕಾರಣವಾಯಿತು. "ಪ್ರಾಥಮಿಕ ಶಾಲೆಯ ತರಗತಿಯ ಮೇಲ್ವಿಚಾರಣೆಗೆಂದು ಹೋಗಿದ್ದಾಗ, ಉಪಾಧ್ಯಾಯರು ಒಂದನೆಯ ತರಗತಿಯ ಹುಡುಗರಿಗೆ ಕಷ್ಟವಾಗಿರುವ ಪ್ರೌಢವಿಷಯಗಳನ್ನು ಹೇಳಿ ಕೊಡುತ್ತಿದ್ದುದ್ದು ಲಕ್ಷ್ಯಕ್ಕೆ ಬಂದಿತು. ವ್ಯಾಕರಣದ ನಿಯಮಗಳಿಲ್ಲದೆ ಹುಡುಗರಿಗೆ ಪಾಠಗಳನ್ನು ಹೇಳಿಕೊಡಬೇಕೆಂಬುದನ್ನು ಅಕ್ಷರಶಃ ಪಾಲಿಸಿ ಶಬ್ದದರ್ಶನದ ಕೆಲವು ಸೂತ್ರಗಳನ್ನು ಬಾಯಲ್ಲಿ ಗಟ್ಟಿಮಾಡಿಕೊಂಡು ತಿಳಿಯುತ್ತಾರೆಂದು ಗೊತ್ತಾಯಿತು." ಆಗ ವೈ. ಸುಬ್ಬರಾಯರಿಗೆ (ಶ್ರೀ ಶ್ರೀ ಗಳು) ಬಹು ಸುಲಭವಾದ ಪ್ರಥಮವ್ಯಾಕರಣವನ್ನು ಬರೆಯಬೇಕೆಂಬ ಔತ್ಸುಕ ಉಂಟಾಗಿ 'ಪದತ್ರಯ'ಕ್ಕೆ ಕಾರಣವಾಯಿತು. ಇದೂ ಸಹಿತ 'ವಾಕ್ಯರಚನಾಕ್ರಮ'ವಾದ ಮೇಲೆ 1916ರಲ್ಲೇ ಬರೆದ ಉತ್ತಮ ಪ್ರಥಮ ವ್ಯಾಕರಣ ಪುಸ್ತಕ.

ಕ್ರಮೇಣ, ಇದನ್ನು ಶಾಲಾ ಪಠ್ಯಪುಸ್ತಕವಾಗಿ ಇಲಾಖೆಯವರು ನಿಗದಿ ಮಾಡಿದರು. ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಮೆಚ್ಚಾದ ಈ ಪುಸ್ತಕ 1925ರ ವೇಳೆಗೆ ಒಂಭತ್ತನೆಯ ಮುದ್ರಣವಾಗಿ, ತಿದ್ದಿದ ಆವೃತ್ತಿಯಾಯಿತು. ಈ ಪುಸ್ತಕದ ಉದ್ದೇಶ, ಉಪಯೋಗವನ್ನು ಮೊದಲ ಆವೃತ್ತಿಯ ಪೀಠಿಕೆಯಲ್ಲೇ ತಿಳಿಸಿದೆ. ಭಾಷೆಯ ಪ್ರಾರಂಭವೇ ವಾಕ್ಯದಿಂದ. ವಾಕ್ಯದ ಮುಖ್ಯ ಅಂಗಗಳಾದ ನಾಮಪದ, ಕ್ರಿಯಾಪದ, ಅವ್ಯಯಗಳ ಪರಿಚಯವೇ ಇದರ ಮೂಲ ಉದ್ದೇಶ. ಎರಡೂ ಪುಸ್ತಕಗಳನ್ನೂ ('ವಾಕ್ಯರಚನಾಕ್ರಮ'ವೂ ಸೇರಿದಂತೆ) ಓದಿ ನೆನಪಿಟ್ಟರೆ, ಕನ್ನಡ ವ್ಯಾಕರಣದ ಮುಖ್ಯಾಂಶ ಸ್ಪಷ್ಟವಾಗುತ್ತದೆ; ಮಾತಿಗೆ ಬರೆವಣಿಗೆಗೆ ಒಂದು ಬಲವನ್ನು ನೀಡುತ್ತದೆ. ಈ ಕಾರಣದಿಂದ ಈ ಪುಸ್ತಕಗಳ ಮರುಮುದ್ರಣವನ್ನು ಕೈಗೊಂಡಿದ್ದೇವೆ. ಸಾರ್ವತ್ರಿಕ ಕನ್ನಡ ತಿಳಿದವರಿಗೂ, ತಿಳಿಯಲು ಆಸಕ್ತರಿಗೂ ಬಹು ಸುಲಭರೀತಿಯಲ್ಲಿ ಮೂಡಿ ಬಂದಿರುವ ಈ ಪುಸ್ತಕಗಳನ್ನು ನೀಡಿ ಶ್ರೀ ಶ್ರೀ ಗಳು (ವೈ. ಸುಬ್ಬರಾಯರು) ಉಪಕಾರ ಮಾಡಿದ್ದಾರೆ. ಕನ್ನಡದವರ ಮನೆಗಳಲ್ಲಿ, ಅದರಲ್ಲೂ ಶಾಲಾ ಮಕ್ಕಳಿರುವಲ್ಲಿ ಈ ಪುಸ್ತಕಗಳು ಶೋಭಿಸುವುದರಲ್ಲಿ ಸಂಶಯವಿಲ್ಲ, ಹಾಗೆಂದು ಪ್ರಕಾಶಕರ ಅನಿಸಿಕೆ, ಆಶಯ, ಹಾರೈಕೆ.

**ಸರ್ವಜಿತು ಸಂವತ್ಸರ** — **ಪ್ರಕಾಶಕರು**
**ಆಷಾಢ ಬಹುಳ ತ್ರಯೋದಶಿ.**
**ತಾ॥ 10.8.2007**

# ವಿಷಯಾನುಕ್ರಮಣಿಕೆ


| ಅಧ್ಯಾಯ | | ಪುಟ |
|---|---|---|
| 1 | ಕರ್ತೃ, ಕರ್ಮ, ಕ್ರಿಯೆಗಳು; ನಾಮಪದ, ಕ್ರಿಯಾಪದ, ಅವ್ಯಯ—ಇವುಗಳನ್ನು ಕಂಡು ಹಿಡಿಯುವುದು. ಅಭ್ಯಾಸ 1 ರಿಂದ 19 ರ ವರೆಗೆ | **1–10** |
| 2 | ನಾಮಪದಗಳಿಗೂ ಕ್ರಿಯಾಪದಗಳಿಗೂ ಆಗುವ ರೂಪ ಭೇದಗಳು—ಲಿಂಗ, ವಚನ, ಪುರುಷ; ಕರ್ತೃಕ್ರಿಯೆಗಳ ಹೊಂದಿಕೆ. ಅಭ್ಯಾಸ 20 ರಿಂದ 30 ರ ವರೆಗೆ | **11–17** |
| 3 | ನಾಮಪದಗಳಿಗೆ ಬರುವ ರೂಪಭೇದಗಳು—ವಿಭಕ್ತಿ. ಅಭ್ಯಾಸ 31 ರಿಂದ 39 ರ ವರೆಗೆ | **17–23** |
| 4 | ಕ್ರಿಯಾಪದಗಳಿಗೆ ಬರುವ ರೂಪಭೇದಗಳು—ಕಾಲ, ಅರ್ಥ. ಅಭ್ಯಾಸ 40 ರಿಂದ 48 ರ ವರೆಗೆ | **23–27** |
| 5 | ವಿಶೇಷಣವಿಶೇಷ್ಯಭಾವ—ನಾಮವಿಶೇಷಣ, ಉತ್ತರವಿಶೇಷಣ, ಕ್ರಿಯಾವಿಶೇಷಣ, ವಿಶೇಷಣವಿಶೇಷಣ. ಅಭ್ಯಾಸ 49 ರಿಂದ 54 ರ ವರೆಗೆ | **27–31** |
| 6 | ಅನ್ವಯ— ನಾಮಪದಗಳಿಗೆ ಕ್ರಿಯಾಪದಗಳಲ್ಲಿ,<br>,, ನಾಮಪದಗಳಲ್ಲಿ,<br>,, ಅವ್ಯಯದಲ್ಲಿ,<br>ಅವ್ಯಯಗಳಿಗೆ ಕ್ರಿಯಾಪದದಲ್ಲಿ,<br>,, ಅವ್ಯಯದಲ್ಲಿ,<br>,, ನಾಮಪದದಲ್ಲಿ,<br>ಅಭ್ಯಾಸ 55 ರಿಂದ 57 ರ ವರೆಗೆ | **31–34** |
| 7 | ಪದಸ್ವರೂಪ—ಪ್ರಕೃತಿ, ಪ್ರತ್ಯಯ; ಸಂಧಿ—ಲೋಪ, ಆಗಮ, ಆದೇಶ. ಅಭ್ಯಾಸ 58 ರಿಂದ 60 ರ ವರೆಗೆ | **34–36** |
| 8 | ಮಿಶ್ರೋದಾಹರಣೆಗಳು, ಅಭ್ಯಾಸ 61 ರಿಂದ 77 ರ ವರೆಗೆ | **36–42** |

# ಪ ದ ತ್ರ ಯ

### ಚಿಕ್ಕವರಿಗೆ ತಿಳಿಸಬೇಕಾದ ಕ್ರಮವನ್ನು ಹಿಡಿದು
### ಅಭ್ಯಾಸಸಹಿತವಾಗಿ ರಚಿಸಿರುವ

# ಕನ್ನಡ ಮೊದಲನೆಯ ವ್ಯಾಕರಣ

## ಅಧ್ಯಾಯ 1

1. ನಾವು ಮಾತನಾಡುವಾಗ ಒಬ್ಬರಿಗೆ ಏನಾದರೂ ಹೇಳುತ್ತೇವೆ; ಇಲ್ಲದಿದ್ದರೆ ಅವರನ್ನು ಏನಾದರೂ ಕೇಳುತ್ತೇವೆ. ಹೇಗೆಂದರೆ:—

| | |
|---|---|
| ದೇವರು ದೊಡ್ಡವನು. | ಜಾನಕಿ ಓದಿದಳು. |
| ಹೆಗ್ಗಣ ನುಗ್ಗಿತು. | ಅಪ್ಪ ಬಂದನೆ? |

(ದೇವರ ವಿಷಯವಾಗಿ ಏನು ಹೇಳುತ್ತೇವೆ?
'ಜಾನಕಿ' ಎಂದರೆ ನಮ್ಮ ಮನಸ್ಸಿನಲ್ಲಿರುವುದನ್ನು ಪೂರ ಹೇಳಿದಂತಾಯಿತೆ?
'ನುಗ್ಗಿತು' ಎಂದು ಯಾವುದರ ವಿಚಾರವಾಗಿ ಹೇಳುತ್ತೇವೆ?
'ಬಂದನೆ' ಎಂದು ಯಾರ ವಿಷಯವಾಗಿ ಕೇಳುತ್ತೇವೆ?)

ಏನಾದರೂ ಅಭಿಪ್ರಾಯವನ್ನು ಪೂರ್ತಿಯಾಗಿ ಹೇಳುವ ಅಥವಾ ಕೇಳುವ ಮಾತುಗಳ ಗುಂಪಿಗೆ ವಾಕ್ಯವೆಂದು ಹೆಸರು.

### ಅಭ್ಯಾಸ 1

ಈ ಕೆಳಗಣ ವಾಕ್ಯಗಳಲ್ಲಿ ಏತರ ವಿಷಯವಾಗಿ ಮಾತನಾಡುತ್ತೇವೆಂಬುದನ್ನು ಹೇಳಿ:

1. ಕೋಳಿ ಕೂಗಿತು. 2. ಬೆಳಗಾಯಿತು. 3. ಹಕ್ಕಿಗಳು ಚಿಲಿಪಿಲಿಗುಟ್ಟುತ್ತವೆ. 4. ಗಾಳಿ ಬೀಸುತ್ತದೆ. 5. ಜನಗಳು ತಿರುಗಾಡುತ್ತಾರೆ. 6. ಸೂರ್ಯ ಹುಟ್ಟಿದನು. 7. ಕತ್ತಲೆ ಹೋಯಿತು. 8. ಬೆಳಕು ಬಂತು. 9. ಹೊತ್ತು ಆಯಿತು. 10. ಬೆಕ್ಕು ಬಂತು. 11. ರಾತ್ರಿ ಆಯಿತು. 12. ಹುಗ್ಗಿ ಆಯಿತೆ? 13. ಕತ್ತೆ ಕಿರುಚುತ್ತದೆ. 14. ಕಾಗೆ ಕಪ್ಪು. 15. ಕಬ್ಬು ಸಪ್ಪೆ. 16. ಮಳೆ ಬಂತು.

## ಅಭ್ಯಾಸ 2

ಈ ವಾಕ್ಯಗಳಲ್ಲಿ ಹೇಳುವ ಮಾತುಗಳನ್ನೂ ಕೇಳುವ ಮಾತುಗಳನ್ನೂ ಗೊತ್ತು ಮಾಡಿ:

1. ಊಟ ಆಯಿತೆ? 2. ಚಂಡು ಹೊಸದು. 3. ದಾಂಡು ಬೇಕು. 4. ಇದು ಹೆಚ್ಚೊ? 5. ಅವನು ಯಾರು? 6. ನೀವು ಬನ್ನಿರಿ. 7. ಹಣ್ಣುಗಳು ಉದುರಿದವು. 8. ಅವನು ಬಂದನು. 9. ಮಗು ಮಲಗಿತೊ? 10. ಮೀನುಗಳು ಈಜುತ್ತವೆ. 11. ನಾನು ಗೆದ್ದೆ. 12. ಕಳ್ಳನು ಸಿಕ್ಕಿದನೊ? 13. ನೀನು ಅತ್ತೆಯೊ? 14. ಅವಳು ಮುದುಕಿ. 15. ನೀನು ಜಾಣೆ. 16. ಅವರು ಸೋತರು.

2. ಯಾವ ವಾಕ್ಯವನ್ನೇ ಆಗಲಿ ಎರಡು ಭಾಗವಾಗಿ ವಿಂಗಡಿಸಬಹುದು. ಹೇಗೆಂದರೆ:—

| ಏತರ ವಿಷಯವಾಗಿ ಮಾತನಾಡುತ್ತೇವೆಂಬುದನ್ನು ಹೇಳುವ ಭಾಗ. | ಅದರ ವಿಷಯವಾಗಿ ಏನು ಹೇಳುತ್ತೇವೆ ಅಥವಾ ಕೇಳುತ್ತೇವೆ ಎಂಬುದನ್ನು ತಿಳಿಸುವ ಭಾಗ. |
|---|---|
| ಕುದುರೆಗಳು | ಓಡುತ್ತವೆ. |
| ಹೂಗಳು | ಅರಳುತ್ತವೆ. |
| ಕಾಗೆ | ಕಪ್ಪೊ? |
| ಅವನು | ಬಂದನೆ? |

ವಾಕ್ಯದಲ್ಲಿ ಏತರ ವಿಷಯವಾಗಿ ಮಾತನಾಡುತ್ತೇವೆಂಬುದನ್ನು ಹೇಳುವ ಮಾತುಗಳಿಗೆ **ಉದ್ದೇಶ**ವೆಂದು ಹೆಸರು. ಉದ್ದೇಶದ ವಿಷಯವಾಗಿ ಏನು ಹೇಳುತ್ತೇವೆಯೋ ಅಥವಾ ಕೇಳುತ್ತೇವೆಯೋ ಅದನ್ನು ತಿಳಿಸುವ ಮಾತುಗಳಿಗೆ **ವಿಧೇಯ**ವೆಂದು ಹೆಸರು.

## ಅಭ್ಯಾಸ 3

ಈ ವಾಕ್ಯಗಳಲ್ಲಿ ಉದ್ದೇಶಗಳನ್ನೂ ವಿಧೇಯಗಳನ್ನೂ ಗೊತ್ತುಮಾಡಿ:

1. ಹಕ್ಕಿಗಳು ಹಾರುತ್ತವೆ. 2. ರಾಮನು ಓದುತ್ತಾನೆ. 3. ಸೀತೆ ನಗುತ್ತಾಳೆ. 4. ಹುಡುಗರು ಬಂದರೋ? 5. ಎತ್ತುಗಳು ಮೇಯಲಿ. 6. ಬೆಂಕಿ ಸುಡುತ್ತದೆಯೆ? 7. ಹಾವು ಹರಿಯುತ್ತದೆ. 8. ಅಡಿಗೆ ಆಯಿತೊ? 9. ರಾಮನು ಎದ್ದನೆ? 10. ಭೀಮನು ಬರೆಯುತ್ತಾನೆ. 11. ಮಕ್ಕಳು ಆಡುತ್ತವೆ. 12. ಪೈರು ಬೆಳೆಯುತ್ತದೆ. 13. ನೀರು ಕುದಿಯುತ್ತದೆ. 14. ಸೂರ್ಯನು ಹುಟ್ಟಿದನು. 15. ಚಂದ್ರನು ಮುಳುಗಿದನೊ? 16. ನೀನು ಜಾಣ. 17. ಹಗ್ಗ ಹರಿಯಿತು. 18. ಗೋಡೆ ಎತ್ತರ.

## ಅಭ್ಯಾಸ 4

ಈ ವಿಧೇಯಗಳಿಗೆ ತಕ್ಕ ಉದ್ದೇಶಗಳನ್ನು ಸೇರಿಸಿ:

1. ಕೆನೆಯುತ್ತದೆ. 2. ಅರಚುತ್ತದೆ. 3. ಬೊಗಳುತ್ತದೆ. 4. ಆರ್ಭಟಿಸುತ್ತದೆ. 5. ಗರ್ಜಿಸಿತು. 6. ಗುಬ್ಬಳಿಸುತ್ತದೆ. 7. ಮೊರೆಯುತ್ತದೆ. 8. ಬುಸುಗುಟ್ಟುತ್ತದೆ. 9. ಗುರುಗುಟ್ಟುತ್ತದೆ. 10. ಏಳುತ್ತಾನೆ. 11. ಬೀಳುತ್ತದೆ. 12. ಅಬ್ಬರಿಸುತ್ತದೆ. 13. ಹೊರಳುತ್ತಾಳೆ. 14. ಸೋತನು. 15. ಪೂರೈಸಿತೊ? 16. ಆರಿ ಹೋಯಿತು.

## ಅಭ್ಯಾಸ 5

ಈ ಉದ್ದೇಶಗಳಿಗೆ ತಕ್ಕ ವಿಧೇಯಗಳನ್ನು ಸೇರಿಸಿ:

1. ಬಿಸಿಲು. 2. ಹುಡುಗರು. 3. ಗಿಣಿ. 4. ದಾಂಡು. 5. ಒಂಟೆಗಳು. 6. ಅವನು. 7. ಹಸು. 8. ಹುಲ್ಲು. 9. ಚಂದ್ರನು. 10. ನಕ್ಷತ್ರಗಳು. 11. ಗಾಳಿ. 12. ಎಲೆಗಳು. 13. ಮಧ್ಯಾಹ್ನ. 14. ಒಳ್ಳೆಯವರು. 15. ಕೆಲವರು. 16. ರಾಮನು. 17. ಮಳೆ.

3. ಈ ಕೆಳಗಣ ವಾಕ್ಯಗಳಲ್ಲಿ ಉದ್ದೇಶವನ್ನೂ ವಿಧೇಯವನ್ನೂ ಬಿಡಿಸಿ ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಎಷ್ಟು ಮಾತುಗಳಿವೆಯೋ ಹೇಳಿ:

ಆಕೆಯು ಚೆನ್ನಾಗಿ ಓದುತ್ತಾಳೆ.

ನಮ್ಮಪ್ಪನು ಬೇಗನೆ ಬರುತ್ತಾನೆ.

ಕೆಲವು ಹಣ್ಣುಗಳು ಮರಗಳ ಕೆಳಗೆ ಇದ್ದವು.

ಇನ್ನೂ ಕೆಲವು ದೇಶಗಳು ಅಷ್ಟೇ ಚಳಿಯಾಗಿರುತ್ತವೆ.

ಉದ್ದೇಶದಲ್ಲಿಯಾಗಲಿ ವಿಧೇಯದಲ್ಲಿಯಾಗಲಿ ಒಂದೊಂದೇ ಮಾತು ಇರಬೇಕೆಂಬ ನಿಯಮವಿಲ್ಲ.

## ಅಭ್ಯಾಸ 6

ಕೆಳಗಣ ವಾಕ್ಯಗಳಲ್ಲಿ ಉದ್ದೇಶಗಳನ್ನೂ ವಿಧೇಯಗಳನ್ನೂ ತೋರಿಸಿ ಅವುಗಳಲ್ಲಿ ಎಷ್ಟು ಮಾತುಗಳಿವೆಯೋ ಹೇಳಿ:

1. ಸೂರ್ಯನು ಕೆಂಡದ ಹಾಗೆ ಕೆಂಪಾಗಿದ್ದಾನೆ. 2. ನನಗೆ ಮೊನೆಯಾದ ಹಲ್ಲುಗಳು ಇವೆ. 3. ಲಕ್ಷ್ಮಿಯು ಸೀತೆಯ ಕೈಗೆ ಸಿಕ್ಕಿದಳು. 4. ನಿನ್ನ ಉಂಗುರ ಥಳಗುಟ್ಟುತ್ತದೆ. 5. ಹಕ್ಕಿಗಳೆಲ್ಲ ಆಕಾಶದಲ್ಲಿ ಹಾರುತ್ತವೆ. 6. ನಾವು ಮೂವರೂ ಒಟ್ಟಿಗೆ ಬಂದೆವು. 7. ಹೆಂಗಸರು ಮನೆಯಲ್ಲಿ ಇದಾರೆ. 8. ಅವನು ಯಾವಾಗಲೂ ಕೆಲಸಕ್ಕೆ ಪಾಲುಮಾರುತ್ತಾನೆ. 9. ಮಾಗಿದ ಹಣ್ಣು ಮೈಗೆ ಒಳ್ಳೆಯದು. 10. ನಿನ್ನ ಅಂಗಿಯೆಲ್ಲ ಹರಿಯಿತು. 11. ನಿಮ್ಮ ಮನೆಯ ಬೆಕ್ಕು ಭಾವಿಗೆ ಬಿತ್ತಂತೆ. 12. ಆ ತಿಳಿಗೇಡಿಯಾದ ಹುಡುಗನು ಎಲ್ಲಿ ಹೋದನು?

4. ಈ ಕೆಳಗಣ ವಾಕ್ಯಗಳ ಉದ್ದೇಶಗಳಲ್ಲಿ ಮುಖ್ಯವಾದ ಮಾತು ಯಾವುದು?

ನನ್ನ ಚಾಕು ಹರಿತವಾಗಿದೆ.

ಊರಿನ ಜನರು ಹೊತ್ತಾಗಿ ಮಲಗುತ್ತಾರೆ.

ನಾಯಿಗಳೆಲ್ಲ ಬೊಗಳುತ್ತವೆ.

ಕಪ್ಪೆಗಳೆರಡೂ ಕುಪ್ಪಳಿಸುತ್ತಿದ್ದವು.

*[ಏನು ಹರಿತವಾಗಿದೆ? (ಚಾಕು.) ಯಾರು ಮಲಗುತ್ತಾರೆ? ಯಾವುವು ಬೊಗಳುತ್ತವೆ? ಯಾವುವು ಕುಪ್ಪಳಿಸುತ್ತಿದ್ದವು?]*

ಉದ್ದೇಶಗಳಲ್ಲಿ ಮುಖ್ಯವಾದ ಮಾತಿಗೆ **ಕರ್ತೃಪದವೆಂದು** ಹೆಸರು.

## ಅಭ್ಯಾಸ 7

ಈ ಕೆಳಗಣ ವಾಕ್ಯಗಳಲ್ಲಿ ಉದ್ದೇಶಗಳನ್ನು ಹೇಳಿ ಕರ್ತೃಪದಗಳನ್ನು ಕಂಡು ಹಿಡಿಯಿರಿ:

1. ನಿನ್ನ ಕೆಲಸ ಆಯಿತೆ? 2. ನಮ್ಮ ಹುಡುಗನ ಬಳಪವೆಲ್ಲಿದೆ? 3. ಲಾಯದ ಕುದುರೆ ಕುಂಟುತ್ತದೆ. 4. ನಿಮ್ಮ ಸೋದರಮಾವನ ಮಗಳು ಅಲ್ಲಿಗೆ ಬರುತ್ತಾಳೆ. 5. ಅಂಥವರು ಯಾರಿದ್ದಾರೆ? 6. ನನಗೆ ಬರೆಯುವುದಕ್ಕೆ ಹೊತ್ತು ಇಲ್ಲ. 7. ತಂದೆಯೊಬ್ಬನೇ ಹೊರಟನು. 8. ಆ ಗುಂಪಿನಲ್ಲಿ ಒಬ್ಬ ಹುಡುಗನು ಕೂಗಿಕೊಂಡನು. 9. ಆ ತಂತ್ರಿಯಾದ ಜೇಡರಹುಳು ಥಟ್ಟನೆ ಹಾರಿತು. 10. ಮಾವಿನಹಣ್ಣುಗಳೆಲ್ಲ ಹುಳಿಯಾಗಿವೆ. 11. ಶಾಲಿನವರೆಲ್ಲ ಶಾಸ್ತ್ರಿಗಳಾದಾರೆ? 12. ಕತ್ತೆಯ ಬೆನ್ನಿನ ಮೇಲೆ ದೊಡ್ಡದೊಂದು ಕಟ್ಟಿಗೆಯ ಹೊರೆ ಇದೆ. 13. ಆ ಮನೆಯ ಹಿತ್ತಲ ಕದವು ಮುರಿದಿತ್ತು.

5. ಈ ಕೆಳಗಣ ವಾಕ್ಯಗಳಲ್ಲಿ ವಿಧೇಯದ ಮುಖ್ಯವಾದ ಮಾತು ಯಾವುದು? ಇದು ಏನನ್ನು ಹೇಳುತ್ತದೆ?

ಹುಡುಗರು ಕೂತುಕೊಂಡರು.

ಆಮೆಯು ವೇಗವಾಗಿ ಓಡೀತೆ?

ಅವನು ಕಳ್ಳನಾದನು.

ಬೀಗದ ಕೈಗಳು ಇಲ್ಲಿ ಇವೆ.

ಇರುವುದನ್ನೂ (ಇಲ್ಲದ್ದನ್ನೂ), ಆಗುವುದನ್ನೂ (ಆಗದ್ದನ್ನೂ), ಮಾಡುವುದನ್ನೂ (ಮಾಡದ್ದನ್ನೂ) ಹೇಳುವ ಮಾತುಗಳೇ ವಿಧೇಯದಲ್ಲಿ ಮುಖ್ಯವಾಗಿರುತ್ತವೆ. ಇವಕ್ಕೆ **ಕ್ರಿಯಾಪದವೆಂದು** ಹೆಸರು.

## ಅಭ್ಯಾಸ 8

ಈ ವಾಕ್ಯಗಳಲ್ಲಿ ಕರ್ತೃಪದವನ್ನೂ ಕ್ರಿಯಾಪದವನ್ನೂ ಹೇಳಿ:

1. ನೀನು ಯಾವಾಗ ಬಂದೆ? 2. ನನ್ನ ಪುಸ್ತಕ ಎಲ್ಲಿ ಇದೆ? 3. ರಾಯರ ಕಣ್ಣುಗಳು ಕೆಂಪಗೆ ಇವೆ. 4. ರಾಮನು ಕಾಡಿಗೆ ಹೊರಟನು. 5. ಆ ಬೇಡನು ಎಲ್ಲಿ ಇದಾನೆ? 6. ಅವನು ಭಾವಿಯೊಳಕ್ಕೆ ಬಿದ್ದನು. 7. ಕಲ್ಲು ನೀರಿನಲ್ಲಿ ಮುಳುಗುತ್ತದೆ. 8. ಬಲ್ಲವರು ಹೀಗೆ ಹೇಳುತ್ತಾರೆ. 9. ನಿಮ್ಮಂಥವರು ಹೀಗೆ ಆಡುತ್ತಾರೆಯೆ? 10. ಮುಂದಿನ ವರ್ಷಕ್ಕೆ ಜಗಳ ನಿಲ್ಲುವುದು. 11. ಆ ಸೀಮೆಯ ಚಿನ್ನವೆಲ್ಲ ಸೂರೆಯಾಯಿತು. 12. ಗಾಳಿ ಬೀಸುತ್ತದೆ. 13. ಕುಚೇಲನ ಮನೆಯಲ್ಲಿ ಏನೂ ಇರಲಿಲ್ಲ.

6. ಕ್ರಿಯಾಪದವಿಲ್ಲದೆ ವಾಕ್ಯವೇ ಆಗುವುದಿಲ್ಲ. ಕೆಲವು ಕಡೆಯಲ್ಲಿ "ಇರು", "ಆಗಿರು"–ಎಂಬ ಕ್ರಿಯೆಗಳನ್ನು ಬೇಕೆಂತ ಬಿಟ್ಟಿರುತ್ತಾರೆ. ಹೇಗಂದರೆ:–

ಈ ಕೋಲು ಚಿಕ್ಕದು. ('ಆಗಿದೆ' ಎಂಬುದು ಬಿಟ್ಟಿದೆ.)
ಹೀಗೆ ಎಷ್ಟೋ ಜನ. (ಇರುತ್ತಾರೆ.)

## ಅಭ್ಯಾಸ 9

ಇಲ್ಲಿ ಬಿಟ್ಟಿರುವ ಕ್ರಿಯಾಪದ ಯಾವುದು?

1. ನಾನು ಕ್ಷೇಮ. 2. ನೀವು ಕ್ಷೇಮವೆ? 3. ಇದು ಚಿನ್ನ. 4. ಗೋಧಿ ತುಟ್ಟಿ. 5. ಇದು ಸುಳ್ಳು. 6. ಅದು ಯಾರು? 7. ಅವನು ಭೀಮನ ತಮ್ಮ. 8. ಮಾವು ಸೊಗಸೊ? 9. ಇದು ಎಷ್ಟು ಕೆಂಪು! 10. ಅದು ನನ್ನ ಗಿಣಿ. 11. ಅದಕ್ಕೆ ಮಾಂಸ ಇಷ್ಟ. 12. ರಾಮನು ಒಳ್ಳೆಯ ಹುಡುಗ. 13. ಅವನು ಬಡಗಿ. 14. ಯಾರಲ್ಲಿ?

7. ಈ ವಾಕ್ಯಗಳನ್ನು ನೋಡಿ:

ಇದು ರಾಮನ ಗಿಣಿ; ಚೆನ್ನಾಗಿ ಮಾತಾಡುತ್ತದೆ. ರಾಮನು ಒಳ್ಳೇ ಹುಡುಗ; ಪಾಠವನ್ನು ಸರಿಯಾಗಿ ಒಪ್ಪಿಸುತ್ತಾನೆ. ಎತ್ತುಗಳು ಹೇರನ್ನು ಹೊರುತ್ತವೆ; ಬಂಡಿಯನ್ನೂ ಎಳೆಯುತ್ತವೆ.

*[ಯಾವುದು ಮಾತಾಡುತ್ತದೆ? ಯಾರು ಒಪ್ಪಿಸುತ್ತಾರೆ? ಯಾವುವು ಎಳೆಯುತ್ತವೆ?]*

ಕರ್ತೃವನ್ನೂ ಬಿಟ್ಟಿರುವುದುಂಟು. ಕ್ರಿಯಾಪದಕ್ಕೆ ಯಾವುದು? ಯಾರು? ಯಾವುವು?–ಎಂಬ ಪ್ರಶ್ನೆಯನ್ನು ಹಾಕಿ ಅದನ್ನು ಕಂಡುಹಿಡಿಯಬಹುದು.

## ಅಭ್ಯಾಸ 10

ಇಲ್ಲಿ ಬಿಟ್ಟಿರುವ ಕರ್ತೃಗಳನ್ನೂ ಕ್ರಿಯೆಗಳನ್ನೂ ಗೊತ್ತುಮಾಡಿ:

1. ಇದು ಖರ್ಜೂರ; ನಿನಗೆ ಅರ್ಧ, ನನಗೆ ಅರ್ಧ. 2. ಕರ್ಪೂರ ಹತ್ತಿಸು. 3. ಅವನ ಹೆಸರು ಮೂರ್ತಿ. 4. ಅಲ್ಲಿ ನೋಡು. 5. ಅವರನ್ನೆಲ್ಲ ಕರೆ, ಬರಲಿ. 6. ಇದು ಏನು?

7. ನೀನು ಯಾರ ಮಗ? 8. ನಿನ್ನ ಹೆಸರೇನು? 9. ಈ ಪುಸ್ತಕ ನನ್ನದು. 10. ಆ ಹಣ್ಣು ಕೆಂಪು.

8. ಈ ಕೆಳಗಣ ವಾಕ್ಯಗಳನ್ನು ನೋಡಿ:

ರಾಮನು ಹಾಡುತ್ತಾನೆ. ಜೇನು ಕಟ್ಟಿದೆ. ಇಲಿ ಓಡಿತು.

(ಇಲ್ಲಿ ಕರ್ತೃ ಯಾವುದು? ಇದನ್ನೇ ಕ್ರಿಯಾಪದವಾಗಿ ಉಪಯೋಗಿಸುವುದಕ್ಕೆ ಬರುತ್ತದೆಯೋ? ಏಕೆ? ಕ್ರಿಯಾಪದ ಯಾವುದು? ಇದನ್ನು ಕರ್ತೃವಾಗಿ ಉಪಯೋಗಿಸಬಹುದೋ? ಏಕೆ?)

ಕೆಲವು ಮಾತುಗಳನ್ನು ಕರ್ತೃವಾಗಿ ಉಪಯೋಗಿಸಬಹುದೇ ಹೊರತು ಕ್ರಿಯಾಪದವಾಗಿ ಉಪಯೋಗಿಸುವುದಕ್ಕೆ ಬರುವುದಿಲ್ಲ. ಏಕೆಂದರೆ, ಇವು ನಾವು ಏತರ ವಿಷಯವಾಗಿ ಮಾತನಾಡುತ್ತೇವೆಯೋ ಅದನ್ನು ಮಾತ್ರ ಹೇಳುತ್ತವೆ.

ಹೀಗೆ ನಾವು ಏತರ ವಿಷಯವಾಗಿ ಮಾತನಾಡುತ್ತೇವೆಯೋ ಅದನ್ನು ಮಾತ್ರ ಹೇಳುವ ಮಾತುಗಳಿಗೆ **ನಾಮಪದಗಳೆಂದು** ಹೆಸರು.

ಇನ್ನು ಕೆಲವು ಮಾತುಗಳು ಒಂದರ ವಿಷಯವಾಗಿ ಹೇಳಬಹುದಾದ ಕೆಲಸವನ್ನು ಮಾತ್ರ ಹೇಳುತ್ತವೆ. ಇವುಗಳನ್ನು ಕರ್ತೃವಾಗಿ ಉಪಯೋಗಿಸುವುದಕ್ಕೆ ಬರುವುದಿಲ್ಲ.

ಹೀಗೆ ಒಂದರ ವಿಷಯದಲ್ಲಿ ಹೇಳಬಹುದಾದ್ದನ್ನು ಅಥವಾ ಕೇಳಬಹುದಾದ್ದನ್ನು ಮಾತ್ರ ಹೇಳುವ ಮಾತುಗಳಿಗೆ **ಕ್ರಿಯಾಪದಗಳೆಂದು** ಹೆಸರು.

## ಅಭ್ಯಾಸ 11

ಈ ಮಾತುಗಳಲ್ಲಿ ನಾಮಪದಗಳು ಯಾವುವು? ಕ್ರಿಯಾಪದಗಳು ಯಾವುವು? ನಿಮ್ಮ ಉತ್ತರವನ್ನು ಹೇಗೆ ಗೊತ್ತುಮಾಡುವಿರೋ ಅದನ್ನು ಹೇಳಿ:

1. ರಾಮ. 2. ಬರುತ್ತಾನೆ. 3. ಅಳುತ್ತೇನೆ. 4. ಅವನು. 5. ಹೋಗಲಿ. 6. ಬಾ. 7. ಬಾಚಿ. 8. ಕೊಡಲಿ. 9. ಇಂಥವರು. 10. ಇದಾರೆ. 11. ಬಂದಾರು. 12. ಬರುತ್ತಾರೆ. 13. ಒಳ್ಳೆಯವನು. 14. ಅಷ್ಟು. 15. ತರಲಾರನು. 16. ಕೊಡ. 17. ತೀರಿತು. 18. ಆಡಿದರು.

9. ಇವುಗಳಲ್ಲಿ ಕರ್ತೃಪದವಾಗಿಯಾಗಲಿ ಕ್ರಿಯಾಪದವಾಗಿಯಾಗಲಿ ಉಪಯೋಗಿಸುವುದಕ್ಕೆ ಬರದ ಮಾತುಗಳು ಯಾವುವು?

ಹಡಗು. ಈಗ. ತಿನ್ನುತ್ತೇನೆ. ಮೆಲ್ಲನೆ. ಹೊರಡು. ಮಲ್ಲಿಗೆ. ಹೀಗೆ. ಥಳಥಳನೆ.

(ಕರ್ತೃವಾಗಿ ಅಥವಾ ಕ್ರಿಯೆಯಾಗಿ ಉಪಯೋಗಿಸುವುದಕ್ಕಾದರೆ ಹಾಗೆ ಮಾಡಿ.)

ನಾಮಪದವೂ ಕ್ರಿಯಾಪದವೂ ಅಲ್ಲದ ಮಾತುಗಳಿಗೆ **ಅವ್ಯಯಗಳೆಂದು** ಹೆಸರು.

## ಅಭ್ಯಾಸ 12

ಈ ಕೆಳಗಣ ಮಾತುಗಳನ್ನು ನಾಮಪದ, ಕ್ರಿಯಾಪದ, ಅವ್ಯಯ, ಎಂಬ ಮೂರು ಪಂಗಡವಾಗಿ ವಿಂಗಡಿಸಿ:

**1.** ಹಿರಿಯರು. **2.** ತರುತ್ತಾರೆ. **3.** ಹೊರಗೆ. **4.** ಪುಸ್ತಕ. **5.** ಮೇಲೆ. **6.** ಹೊರೆ. **7.** ಹೊಂದುವನು. **8.** ಬಳಿಕ. **9.** ಏನು. **10.** ಜೋಕೆ. **11.** ಮಧುರೆ. **12.** ಕೆಟ್ಟಿತು. **13.** ಹಾಗೆ. **14.** ಇಲ್ಲ. **15.** ಗೋಡೆ. **16.** ಅಲ್ಲದೆ. **17.** ಕೆಟ್ಟನು. **18.** ಮತ್ತು. **19.** ಮುತ್ತು. **20.** ಮುಂದೆ.

**10.** "ಗಿಡ" ಇದನ್ನು ಕರ್ತೃವಾಗಿ ಉಪಯೋಗಿಸುವುದಕ್ಕೆ ಆಗುತ್ತದೆ; ಕ್ರಿಯಾಪದವಾಗಿ ಉಪಯೋಗಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ಇದು ಯಾವ ಪದ? ಇದಕ್ಕೆ ಬೇರೆ ಬೇರೆ ರೂಪಗಳುಂಟು. ಹೇಗೆಂದರೆ:—

ಗಿಡವು, ಗಿಡವನ್ನು, ಗಿಡದಿಂದ, ಗಿಡಕ್ಕೆ, ಗಿಡದ, ಗಿಡದಲ್ಲಿ.

*['ಬೆಳೆಯುತ್ತದೆ,' ಇದು ಯಾವ ಪದ? ಹೇಗೆ? ಇದಕ್ಕೂ ಬೇರೆ ಬೇರೆ ರೂಪಗಳುಂಟೊ? ಕೆಲವನ್ನು ಹೇಳಿ. (ಬೆಳೆಯಿತು.)*

*'ಈಗ' ಇದು ಯಾವ ಪದ? ಹೇಗೆ? ಇದಕ್ಕೆ ಬೇರೆ ರೂಪಗಳುಂಟೊ?]*

ನಾಮಪದಗಳಿಗೂ ಕ್ರಿಯಾಪದಗಳಿಗೂ ರೂಪಭೇದವುಂಟು. ಅವ್ಯಯಗಳು ಒಂದೇ ರೂಪದಲ್ಲಿರುತ್ತವೆ.

## ಅಭ್ಯಾಸ 13

ಇವು ನಾಮಪದವೊ? ಕ್ರಿಯಾಪದವೊ? ಅವ್ಯಯವೊ? ಅವ್ಯಯವಲ್ಲದಿದ್ದರೆ ಅದಕ್ಕೆ ಮತ್ತೆ ಕೆಲವು ರೂಪಗಳನ್ನೂ ಹೇಳಿ:

**1.** ಹಕ್ಕಿ. **2.** ಹಾರುತ್ತದೆ. **3.** ಬೇಗ. **4.** ಮಂಜು. **5.** ಗುಡುಗು. **6.** ಸಂಗಡ. **7.** ಗೂಬೆಗಳು. **8.** ಮೆಲ್ಲಗೆ. **9.** ಮುಂಚೆ. **10.** ಅವನು. **11.** ಹತ್ತಿರ. **12.** ಕೆಟ್ಟವರು. **13.** ಇಷ್ಟು. **14.** ಅಲ್ಲಿ. **15.** ಬೀಳುತ್ತದೆ. **16.** ಹೌದು. **17.** ಹೇಳು. **18.** ಆಗಾಗ. **19.** ಕರೆಯುತ್ತಾರೆ. **20.** ಹೊರತು.

**11.** ಈ ಕೆಳಗಣ ನಾಮಪದ, ಕ್ರಿಯಾಪದ, ಅವ್ಯಯ—ಇವುಗಳು ಎಷ್ಟೆಷ್ಟು ಮಾತುಗಳು ಸೇರಿ ಆಗಿವೆ?

| ನಾಮಪದ. | ಕ್ರಿಯಾಪದ. | ಅವ್ಯಯ. |
|---|---|---|
| ತೆಂಗಿನಕಾಯಿ | ಹೆಸರುಗೊಂಡನು | ಕಂಡಾಬಟ್ಟೆಯಾಗಿ |
| ಸುರಿಮಳೆ | ಕಷ್ಟಪಟ್ಟಳು | ಹಸೇಮೇಲೆ |
| ಕಾಡುಮರ | ಒಳಕೊಳ್ಳುತ್ತದೆ | ಬೇರುಮುಟ್ಟ |
| ಕಡೆಗಣ್ಣು | ಮೇಲುಮಾಡಿದನು | ಕಣ್ಣಾರೆ |

| | | |
|---|---|---|
| ನಾಗಾಲು | ಭಾವೀಬಿದ್ದನು | ಹೇಗೆಂದರೆ |
| ಮನೆಮುರುಕ | ಬಾಯಿಮುಚ್ಚು | ಅಡ್ಡಾದಿಡ್ಡಿಯಾಗಿ |

ಎರಡು ಅಥವಾ ಹೆಚ್ಚು ಮಾತುಗಳು ಸೇರಿ ಒಂದು ಮಾತಾಗಿದ್ದರೆ **ಸಮಾಸ**ವೆಂದು ಹೆಸರು.

## ಅಭ್ಯಾಸ 14

ಈ ವಾಕ್ಯಗಳಲ್ಲಿರುವ ಸಮಾಸಗಳನ್ನು ತೋರಿಸಿ ಅವುಗಳು ಯಾವ ಪದವೆಂಬುದನ್ನು ಹೇಳಿ:

1. ಇದು ಕೇಸಕ್ಕಿ. 2. ಹರಳೆಣ್ಣೆ ತುಟ್ಟಿ. 3. ಅಲ್ಲಿ ಮೊಸರವಲಕ್ಕಿ ಇದೆ. 4. ಏಕೆ ದುಃಖಪಡುತ್ತೀಯೆ? 5. ಉಪಾಧ್ಯಾಯರು ಸಿಟ್ಟಾದರು. 6. ಈ ಹಸು ಎಳೆಗಂದಿ. 7. ತಾಯಿತಂದೆಗಳಲ್ಲಿ ವಿಧೇಯನಾಗಿರು. 8. ಅವನು ಹುಟ್ಟುಕುರುಡ. 9. ಅವರು ಹಣಾಹಣಿ ಹೊಡೆದಾಡಿದರು. 10. ಕರಿಗಡುಬು ಬೇಕೋ? 11. ಹೊಟ್ಟೆತುಂಬ ತಿನ್ನಿರಿ. 12. ಬಾಯಿ ತುಂಬ ಸಕ್ಕರೆ ಸಿಕ್ಕಿತು. 13. ಗುರುಗಳ ಕುದುರೆ ಬರುಬರುತ್ತ ಕತ್ತೆಯಾಯಿತು.

12. ಈ ಕೆಳಗಣ ವಾಕ್ಯಗಳನ್ನು ನೋಡಿ:

ರಾಮನು ಕೃಷ್ಣನನ್ನು ಹೊಡೆದನು.
ಮುಚ್ಚಿಗರವನು ಜೋಡು ಮಾಡುತ್ತಾನೆ.
ಕೊಡಯ್ಯ, ನನ್ನ ಪುಸ್ತಕವನ್ನ.
ನನ್ನ ಕೇಳಿದ; ನಾನು ಉತ್ತರವನ್ನು ಕೊಟ್ಟೆ.

(ಯಾರು ಹೊಡೆದರು? ಯಾರನ್ನು ಹೊಡೆದನು? ಯಾರು ಮಾಡುತ್ತಾನೆ? ಏನನ್ನು ಮಾಡುತ್ತಾನೆ? 'ಕೊಡಯ್ಯ' ಎಂದರೆ ಯಾರು? ಏನನ್ನು ಕೊಡಬೇಕು? ಯಾರು ಕೇಳಿದರು? ಏನನ್ನು ಕೊಟ್ಟೆ?)

ಕ್ರಿಯಾಪದದ ಹಿಂದೆ 'ಯಾರು?' 'ಏನು?' 'ಯಾವುದು?' 'ಯಾವುವು?'–ಎಂಬ ಪ್ರಶ್ನೆಯನ್ನು ಹಾಕಿದರೆ ಕರ್ತೃ ಗೊತ್ತಾಗುತ್ತದೆ.

ಕ್ರಿಯಾಪದದ ಹಿಂದೆ "ಯಾರನ್ನು?" "ಏನನ್ನು?" "ಯಾವುದನ್ನು?" "ಯಾವುವನ್ನು?" ಎಂಬ ಮಾತುಗಳನ್ನು ಇಟ್ಟು ಕೇಳಿದರೆ ಬರುವ ಉತ್ತರಕ್ಕೆ **ಕರ್ಮ**ಪದವೆಂದು ಹೆಸರು.

## ಅಭ್ಯಾಸ 15

ಇಲ್ಲಿ ಕರ್ತೃಪದವನ್ನೂ ಕರ್ಮಪದವನ್ನೂ ಗೊತ್ತುಮಾಡಿ:

1. ಅವಳು ನನ್ನನ್ನು ಚಿಗುಟಿದಳು. 2. ರಾಮನು ಪಾಠಗಳನ್ನು ಕಲಿಯುತ್ತಾನೆ. 3. ರಂಗನು ಕಾಗದವನ್ನು ಹರಿದನು. 4. ತೋಳವು ಕುರಿಯನ್ನು ತಿಂದಿತು. 5. ಆ ಮನುಷ್ಯನು

ಕತ್ತೆಯನ್ನು ಹೊಡೆದನು. 6. ಸಂಸ್ಕೃತವನ್ನು ಕಲಿಯುತ್ತೀಯೋ? 7. ಪುಟ್ಟಯ್ಯನು ತಂಗಿಯನ್ನು ಗೋಳಾಡಿಸುತ್ತಾನೆ. 8. ಹುಡುಗನು ಬಾಳೆಯಹಣ್ಣುಗಳನ್ನು ತಿಂದನು. 9. ಕಪಿಯು ಲಂಕೆಯನ್ನು ಸುಟ್ಟಿತು. 10. ಏನು ಮಾಡುತ್ತಿ? 11. ರೈತನು ಪೈರು ಬೆಳೆದನು. 12. ಬಲ್ಲವನೇ ಬಲ್ಲ ಬೆಲ್ಲದ ಸವಿಯ.

13. ಈ ಕೆಳಗಣ ವಾಕ್ಯಗಳನ್ನು ನೋಡಿ:

ಅವನು ಇರುತ್ತಾನೆ.
ಮಗು ಅಳುತ್ತದೆ.
ಕೂಲಿಯವರು ಹೋಗುತ್ತಾರೆ.
ಗಿಡವು ಬೆಳೆಯಿತು.

*[ಇಲ್ಲಿ "ಏನನ್ನು ಇರುತ್ತಾನೆ? ಯಾರನ್ನು ಅಳುತ್ತದೆ? ಯಾವುದನ್ನು ಹೋಗುತ್ತಾರೆ? ಯಾವುದನ್ನು ಬೆಳೆಯಿತು?"—ಹೀಗೆ ಕೇಳಬಹುದೊ?]*

ಕೆಲವು ಕ್ರಿಯಾಪದಗಳಿಗೆ 'ಏನನ್ನು?', 'ಯಾರನ್ನು?' 'ಯಾವುದನ್ನು?', 'ಯಾವುವನ್ನು'—ಎಂಬ ಪ್ರಶ್ನೆಗಳು ಹುಟ್ಟುವುದಿಲ್ಲ. ಅವುಗಳಿಗೆ ಅಕರ್ಮಕವೆಂದು ಹೆಸರು. ಈ ಪ್ರಶ್ನೆಗಳಲ್ಲಿ ಯಾವುದಾದರೂ ಸರಿಹೋದರೆ ಅವುಗಳಿಗೆ ಸಕರ್ಮಕವೆಂದು ಹೆಸರು.

## ಅಭ್ಯಾಸ 16

ಇವುಗಳಲ್ಲಿ ಸಕರ್ಮಕಕ್ರಿಯಾಪದಗಳನ್ನೂ ಅಕರ್ಮಕಕ್ರಿಯಾಪದಗಳನ್ನೂ ಗೊತ್ತು ಮಾಡಿ:

1. ನಾವು ಬೇಗ ಬಂದೆವು. 2. ಅವನನ್ನು ಕರೆ. 3. ಮಳೆ ಬಿತ್ತು. 4. ಬಡಗಿಯು ಪೆಟ್ಟಿಗೆಯನ್ನು ಮಾಡುವನು. 5. ಊಟವಾಯಿತು. 6. ಸೀತೆ ಕೆಲಸವನ್ನು ಮುಗಿಸಿದಳು. 7. ಗೋಪಾಲನು ಬಾಗಿಲನ್ನು ಮುರಿದನು. 8. ಅವನು ತುಂಬ ಹೆದರುತ್ತಾನೆ. 9. ಒಂದು ರಾಗವನ್ನು ಹಾಡು. 10. ಬೆಕ್ಕುಗಳು ಇಲಿಗಳನ್ನು ತಿನ್ನುತ್ತವೆ. 11. ಪುಸ್ತಕವು ಎಲ್ಲಿ ಇದೆ? 12. ಆಳು ಕಸವನ್ನು ಗುಡಿಸಿದನು. 13. ಈ ಗೋಡೆ ಬೀಳುವುದು.

## ಅಭ್ಯಾಸ 17

ಇವುಗಳಲ್ಲಿ ಬಿಟ್ಟಿರುವ ಕರ್ಮಪದಗಳನ್ನು ಸೇರಿಸಿ:

1. ಕುದುರೆಗಳು ತಿಂದವು. 2. ಅಕ್ಕನು ಹೆಚ್ಚುತ್ತಾಳೆ. 3. ಹಬ್ಬದಲ್ಲಿ ಉಡುತ್ತಾರೆ. 4. ಇಲಿಗಳು ಹೊಕ್ಕವು. 5. ಆ ಕೆಟ್ಟ ಹುಡುಗನು ಬೆದರಿಸಿದನು. 6. ಏಕೆ ಕಿತ್ತೆ? 7. ರೈತನು ಉತ್ತನು. 8. ಈ ಹಸು ಕೊಡುತ್ತದೆ. 9. ನಾಯಿ ಕಾಯುವುದು. 10. ಒಡ್ಡನು ಮಿದಿಯುತ್ತಾನೆ.

## ಅಭ್ಯಾಸ 18

ಇಲ್ಲಿ ಕರ್ಮವು ಒಪ್ಪುವ ಕಡೆಯಲ್ಲಿ ಅದನ್ನು ಸೇರಿಸಿ.

1. ನೀವು ನೋಡಿದ್ದೀರೋ? 2. ನನಗೆ ಹಲ್ಲುಗಳು ಇವೆ. 3. ನಾನು ತಿನ್ನುತ್ತೇನೆ. 4. ಇದು ನಾಯಿ. 5. ನಾನು ಸಾಕುತ್ತೇನೆ. 6. ಹುಡುಗರು ಕಂಡರು. 7. ರಾಮನು ಕೆಡವಿದನು. 8. ಮಳೆ ಬಿತ್ತು. 9. ಪ್ರಯಾಣಿಕರು ಕೊಟ್ಟರು. 10. ಹುಡುಗಿ ಕುಯ್ದಳು. 11. ಮಗು ಬಿತ್ತು. 12. ಆಳು ಹರಡುತ್ತಾನೆ. 13. ಜನರು ಗೋಳಿಡುತ್ತಾರೆ. 14. ಹುಲಿಯು ಕೊಂದಿತು. 15. ಕೌರವರು ಸೋತರು. 16. ರೈತನು ಒಕ್ಕುತ್ತಾನೆ.

14. ಈ ಕೆಳಗಣ ವಾಕ್ಯಗಳಲ್ಲಿ ನಾಮಪದಗಳನ್ನೂ ಕ್ರಿಯಾಪದಗಳನ್ನೂ ನೋಡಿ:

| | |
|---|---|
| ಮರ ಹತ್ತು. | ನೀರು ಕುಡಿ. |
| ಹತ್ತು ಆಯಿತು. | ಕುಂಬಳಕುಡಿ ಸಿಕ್ಕುತ್ತದೆಯೋ? |

*[ಒಂದನೆಯ ವಾಕ್ಯದಲ್ಲಿ 'ಹತ್ತು' ಎಂದರೇನರ್ಥ? ಎರಡನೆಯ ವಾಕ್ಯದಲ್ಲಿಯೋ? ಮೂರನೆಯ ವಾಕ್ಯದಲ್ಲಿ "ಕುಡಿ" ಎಂದರೇನು? ನಾಲ್ಕನೆಯದಲ್ಲಿಯೋ?]*

ಕೆಲವು ಮಾತುಗಳು ಕರ್ತೃಪದವಾಗಿಯೂ ಕ್ರಿಯಾಪದವಾಗಿಯೂ ಉಪಯೋಗಿಸುವುದಕ್ಕೆ ಬರುತ್ತವೆ. ಇವು ನೋಡುವುದಕ್ಕೆ ಒಂದೇ ರೂಪದಲ್ಲಿದ್ದರೂ ಅರ್ಥ ಬೇರೆಯಾಗಿರುವುದರಿಂದ ಇವೆರಡೂ ಒಂದೇ ಮಾತಲ್ಲ. ಕರ್ತೃಪದವಾಗುವ ಮಾತೇ ಬೇರೆ; ಕ್ರಿಯಾಪದವಾಗುವ ಮಾತೇ ಬೇರೆ.

## ಅಭ್ಯಾಸ 19

ಇವುಗಳನ್ನು ಕರ್ತೃಪದವಾಗಿಯೂ ಕ್ರಿಯಾಪದವಾಗಿಯೂ ಉಪಯೋಗಿಸಿ ಬರೆಯಿರಿ:

1. ಮುತ್ತು. 2. ಎತ್ತು. 3. ಕರೆ. 4. ಕೆರೆ. 5. ತಿಳಿ. 6. ಆಳು. 7. ಕಟ್ಟು. 8. ಬೀಳು.

15. ಈ ವಾಕ್ಯಗಳಲ್ಲಿ ವಿಧೇಯದ ಮುಖ್ಯವಾದ ಮಾತುಗಳು ಯಾವುವು? ಇವುಗಳಿಗೆ ಬೇರೆಬೇರೆ ರೂಪವುಂಟೇ?

| | |
|---|---|
| ತಿಂಡಿಯಿಲ್ಲ. | ಜನರುಂಟು. |
| ಎಷ್ಟು ಬೇಕು. | ಅಷ್ಟು ಸಾಕು? |
| ಅಷ್ಟು ಬೇಡ. | ಅವನೇ ಹೌದು. |

ಕೆಲವು [1]ಅವ್ಯಯಗಳೇ ಕ್ರಿಯಾಪದದ ಸ್ಥಾನದಲ್ಲಿ ಬರುತ್ತವೆ. ಇವುಗಳಿಗೆ ಕ್ರಿಯಾರ್ಥಕಾವ್ಯಯಗಳೆಂದೂ ಅವ್ಯಯಕ್ರಿಯೆಗಳೆಂದೂ ಹೆಸರು.

---

[1]'ಬಾರದು', 'ಕೂಡದು', 'ಬಹುದು', 'ಆಗದು'—ಮೊದಲಾದುವು ಅವ್ಯಯಗಳಲ್ಲ. ಇವುಗಳಿರುವ ವಾಕ್ಯಗಳನ್ನು ಬಾಲಕರಿಗೆ ಕೊಡದೆ ಇರುವುದು ಒಳ್ಳೆಯದು; ಅಥವಾ ಇವುಗಳು ಕ್ರಿಯಾಪದವೆಂಬುದನ್ನು ತಿಳಿಸಿಕೊಡಬೇಕು.

# ಅಧ್ಯಾಯ 2

**16.** ಈ ಕೆಳಗಣ ವಾಕ್ಯಗಳಲ್ಲಿ ಗಂಡಸರನ್ನು ಹೇಳುವ ಮಾತುಗಳು ಯಾವುವು? ಹೆಂಗಸರನ್ನು ಹೇಳುವ ಮಾತುಗಳು ಯಾವುವು?

| | |
|---|---|
| ಗೋವಿಂದನು ಹೋದನು. | ಹುಡುಗನು ಆಡುತ್ತಾನೆ. |
| ಸೀತೆ ಹೋದಳು. | ಹುಡುಗಿ ಆಡುತ್ತಾಳೆ. |
| ಅವನು ಕರಿಯ. | ಅವಳು ಜಾಣೆ. |

ಗಂಡಸರನ್ನು ಹೇಳುವ ಮಾತು ಪುಲ್ಲಿಂಗ. ಹೆಂಗಸರನ್ನು ಹೇಳುವ ಮಾತು ಸ್ತ್ರೀಲಿಂಗ.

## ಅಭ್ಯಾಸ 20

ಇವು ಯಾವ ಲಿಂಗ?

**1.** ಮಗನು. **2.** ಇವಳು. **3.** ಇವನು. **4.** ಓಡುತ್ತಾನೆ. **5.** ಇಂಥವನು. **6.** ಒಬ್ಬಳು. **7.** ಬರೆದಳು. **8.** ಹೇಳುವನು. **9.** ಪಡೆದನು. **10.** ಮಾಡುತ್ತಾನೆ. **11.** ಆಳುತ್ತಾಳೆ. **12.** ಎಂಥವಳು. **13.** ಎಷ್ಟನೆಯವನು. **14.** ಬರುತ್ತಾಳೆ. **15.** ತರುತ್ತಾನೆ. **16.** ಕೊಡುವವನು. **17.** ಇಟ್ಟಳು. **18.** ಯಾವಳು. **19.** ಹಿರಿಯವನು. **20.** ಹೋಗುತ್ತಾನೆ.

**17.** ನಾಮಪದಗಳು ಪುಲ್ಲಿಂಗದಿಂದ ಸ್ತ್ರೀಲಿಂಗವಾಗುವ ರೀತಿಯನ್ನು ಈ ಕೆಳಗಣ [1]ಪಟ್ಟಿಯಿಂದ ಗೊತ್ತುಮಾಡಿ:

| ಪುಲ್ಲಿಂಗ | ಸ್ತ್ರೀಲಿಂಗ | ಪುಲ್ಲಿಂಗ | ಸ್ತ್ರೀಲಿಂಗ |
|---|---|---|---|
| ಮಗನು | ಮಗಳು | ಅವನು | ಅವಳು |
| ಒಳ್ಳೆಯವನು | ಒಳ್ಳೆಯವಳು | ಒಬ್ಬನು | ಒಬ್ಬಳು |
| ಗಾಣಿಗ | ಗಾಣಿಗಿತ್ತಿ | ಹೂವಾಡಿಗ | ಹೂವಾಡಿಗಿತ್ತಿ |
| ಬ್ರಾಹ್ಮಣ | ಬ್ರಾಹ್ಮಣಿತಿ | ಹೊಲೆಯ | ಹೊಲತಿ |
| ಅರಸ | ಅರಸಿತಿ | ಅರಸು | ಅರಸಿ |
| ಹೆಡ್ಡ | ಹೆಡ್ಡಿ | ಜಾಣ | ಜಾಣೆ |
| ಹುಚ್ಚ | ಹುಚ್ಚಿ | ಮೂಗ | ಮೂಗಿ |
| ಹೆಗ್ಗಡೆ | ಹೆಗ್ಗಡಿತಿ | ಬೀಗ | ಬೀಗಿತಿ |

[1]ಇವುಗಳಲ್ಲಿ ಒಂದು ರೂಪವನ್ನು ಮೊದಲು ಕಪ್ಪುಹಲಗೆಯ ಮೇಲೆ ಬರೆದು ಇನ್ನೊಂದು ರೂಪವನ್ನು ಹುಡುಗರಿಂದಲೇ ಹೇಳಿಸಿ ಆಮೇಲೆ ಬರೆಯುತ್ತ ಹೋಗಬೇಕು.

ಸ್ತ್ರೀಲಿಂಗಕ್ಕೆ "ಳ" ಕಾರವೂ 'ತಿ', 'ಇತಿ', 'ಗಿತ್ತಿ', 'ಇತ್ತಿ', 'ಎ', 'ಇ' — ಎಂಬವೂ ಗುರುತಾಗಿರುತ್ತವೆ. ನಾಮಪದಗಳ ಲಿಂಗವನ್ನು ಮುಖ್ಯವಾಗಿ ಅರ್ಥ ದಿಂದಲೇ ನಿರ್ಧರಿಸಬೇಕು ಎಷ್ಟೋ ಮಾತುಗಳಿಗೆ ಯಾವ ಗುರುತುಗಳೂ ಇರುವು ದಿಲ್ಲ. ಹೇಗೆಂದರೆ:

ಅಕ್ಕ (ಸ್ತ್ರೀ), ಅಣ್ಣ (ಪು).

## ಅಭ್ಯಾಸ 21

ಇವುಗಳ[2] ಸ್ತ್ರೀಲಿಂಗವೇನು?

1. ಹುಡುಗ. 2. ಅಪ್ಪ. 3. ಮಾವ. 4. ಅಳಿಯ. 5. ಗಂಡ. 6. ರಾಜ. 7. ಯಜ ಮಾನ. 8. ಒಡೆಯ. 9. ನಟ. 10. ಚಕ್ರವರ್ತಿ. 11. ಕುರುಬ. 12. ಗಂಡಾಳು. 13. ಮದವಣಿಗ. 14. ಅಣ್ಣ. 15. ತಮ್ಮ. 16. ಮಂತ್ರಗಾರ. 17. ತಂದೆ. 18. ಯಾವನು? 19. ಎಷ್ಟರವನು? 20. ಒಬ್ಬಾನೊಬ್ಬನು. 21. ನಮ್ಮವನು. 22. ಕೆಟ್ಟ ವನು. 23. ಬಿಳಿಯವನು. 24. ಅಂಥವನು. 25. ಕುಂಬಾರ. 26. ಸಿಸ್ತುಗಾರ. 27. ಚದುರ. 28. ಸುಂದರ. 29. ತಿರುಕ. 30. ಹೊಸಬ. 31. ಹೊಟ್ಟೆಬಾಕ. 32. ಬೇಡ. 33. ಭಾಗ್ಯ ವಂತ. 34. ಗುಣವಂತ. 35. ನಾಯಿಂದ. 36. ಗೆಳೆಯ.

18. ಈ ವಾಕ್ಯಗಳಲ್ಲಿ ಮನುಷ್ಯರನ್ನು ಹೇಳದ ಮಾತುಗಳು ಯಾವುವು?

ಹಕ್ಕಿ ಹಾರುತ್ತದೆ. ಕಲ್ಲು ಬೀಳುತ್ತದೆ.
ಹಾವು ಹರಿಯುತ್ತದೆ. ಬೆಂಡು ತೇಲುತ್ತದೆ.

ಮನುಷ್ಯರನ್ನು ಬಿಟ್ಟು ಉಳಿದದ್ದನ್ನು ಹೇಳುವ ಮಾತುಗಳು **ನಪುಂಸಕಲಿಂಗ**.

## ಅಭ್ಯಾಸ 22

ಈ ಮಾತುಗಳು ಯಾವ ಲಿಂಗ?

1. ಹಸು. 2. ಕೊಂಬು. 3. ಇದೆ. 4. ಇಲಿ. 5. ಬಾಲ. 6. ಚೇಷ್ಟೆ. 7. ದೊರೆ. 8. ಅಗಸ. 9. ಬೇಟೆಗಾರ. 10. ಹೊಡೆಯುತ್ತಾನೆ. 11. ಗುಮಾಸ್ತೆ. 12. ಎಣ್ಣೆ. 13. ನರಿ. 14. ಚಿಕ್ಕಮ್ಮ. 15. ಕೂಲಿಯವನು. 16. ಉಪಾಧ್ಯಾಯನು. 17. ಬೇಡರವನು. 18. ಹೆಂಡತಿ. 19. ಸೊಸೆ. 20. ದನ. 21. ಆಳು. 22. ಭಾವ. 23. ರಾಮ. 24. ಲಕ್ಷ್ಮಿ.

---

[2] ಇಲ್ಲಿ ಶಬ್ದದಿಂದಲೇ ಬಂದಿರುವ ಸ್ತ್ರೀಲಿಂಗವನ್ನೂ ಅರ್ಥದಿಂದಲೇ ಆಗಿರುವ ಸ್ತ್ರೀಲಿಂಗವನ್ನೂ ಆಯಾ ಶಬ್ದದ ಸ್ತ್ರೀಲಿಂಗವೆಂದೇ ತಿಳಿಯಬೇಕು. ಹೇಗೆಂದರೆ 'ಅಣ್ಣ' ಇದರ ಸ್ತ್ರೀಲಿಂಗ 'ಅಕ್ಕ'; 'ಗೌಡ' ಇದಕ್ಕೆ 'ಗೌಡಿತಿ'.

**19.** ಈ ವಾಕ್ಯಗಳಲ್ಲಿ ಒಂದನ್ನು ಹೇಳುವ ಮಾತುಗಳು ಯಾವುವು? ಒಂದಕ್ಕಿಂತ ಹೆಚ್ಚು ಹೇಳುವುವು ಯಾವುವು?

| | |
|---|---|
| ಅಣ್ಣ ಬರುತ್ತಾನೆ. | ನಿನಗೆ ತಮ್ಮಂದಿರೆಷ್ಟುಮಂದಿ? |
| ಇದೊಂದು ಬೇವಿನಮರ. | ಅಲ್ಲಿ ಮಾವಿನಮರಗಳುಂಟೊ? |
| ಅವನು ಹುಚ್ಚ. | ನೀವಿಬ್ಬರೂ ದಡ್ಡರು. |

ಒಂದನ್ನು ಹೇಳುವ ಮಾತಿಗೆ **ಏಕವಚನವೆಂದೂ** ಒಂದಕ್ಕಿಂತ ಹೆಚ್ಚು ಹೇಳುವ ಮಾತಿಗೆ **ಬಹುವಚನವೆಂದೂ** ಹೆಸರು.

## ಅಭ್ಯಾಸ 23

ಇಲ್ಲಿರುವ ಏಕವಚನದ ನಾಮಪದಗಳನ್ನೂ ಬಹುವಚನದ ನಾಮಪದಗಳನ್ನೂ ಹೇಳಿ:

**1.** ನಾನು ಬೆಕ್ಕು. **2.** ನೀವು ಹುಲಿಯನ್ನು ನೋಡಿದ್ದೀರೋ? **3.** ಮುಖ ದೊಡ್ಡದು. **4.** ಇಲಿ ಬಂತು. **5.** ಇದು ಏಣಿ. **6.** ಬಟ್ಟೆಗಳನ್ನು ಒಪ್ಪವಾಗಿ ಇಟ್ಟುಕೊಳ್ಳುತ್ತಾರೆ. **7.** ಚಿಕ್ಕಪ್ಪ ಬಂದನು. **8.** ಹುಡುಗರು ನಗುತ್ತಾರೆ. **9.** ದಾಸಿಯು ಮಕ್ಕಳನ್ನು ಆಡಿಸುತ್ತಾಳೆ. **10.** ಕುರಿಗಳು ಹುಲ್ಲು ತಿನ್ನುತ್ತವೆ. **11.** ಹಲ್ಲು ಬಿತ್ತು. **12.** ನಾಯಿಗಳು ಜಿಂಕೆಯನ್ನು ಹಿಡಿಯುತ್ತವೆ.

**20.** ಈ ಕೆಳಗಣ ಪಟ್ಟಿ[3]ಯಿಂದ ನಾಮಪದಗಳ ಬಹುವಚನವಾಗುವ ಕ್ರಮವನ್ನು ಗೊತ್ತುಮಾಡಿ.

| ಏಕವಚನ | ಬಹುವಚನ | ಏಕವಚನ | ಬಹುವಚನ |
|---|---|---|---|
| ಮುದುಕನು | ಮುದುಕರು<br>ಮುದುಕರುಗಳು | ಹುಡುಗನು | ಹುಡುಗರು<br>ಹುಡುಗರುಗಳು |
| ಅವನು, ಅವಳು | ಅವರು<br>ಅವರುಗಳು | ಹಿರಿಯವನು | ಹಿರಿಯವರು<br>ಹಿರಿಯವರುಗಳು |
| ಒಬ್ಬನು | ಒಬ್ಬರು | ಅಂಥವನು | ಅಂಥವರು<br>ಅಂಥವರುಗಳು |
| ಅತ್ತೆ | ಅತ್ತೆಯರು<br>ಅತ್ತೆಯರುಗಳು | ಸೊಸೆ | ಸೊಸೆಯರು<br>ಸೊಸೆಯರುಗಳು |
| ಹುಚ್ಚಿ | ಹುಚ್ಚಿಯರು | ಹುಡುಗಿ | ಹುಡುಗಿಯರು |

[3] 11ನೆಯ ಪುಟದ ಟಿಪ್ಪಣಿಯನ್ನು ನೋಡಿ.

| | | | |
|---|---|---|---|
| | | | ಹುಡುಗಿಯರುಗಳು |
| ಅಣ್ಣ | ಅಣ್ಣಂದಿರು<br>ಅಣ್ಣಂದಿರುಗಳು | ತಮ್ಮ | ತಮ್ಮಂದಿರು<br>ತಮ್ಮಂದಿರುಗಳು |
| ಅಕ್ಕ | ಅಕ್ಕಂದಿರು<br>ಅಕ್ಕಂದಿರುಗಳು | ಭಾವ | ಭಾವಂದಿರು<br>ಭಾವಂದಿರುಗಳು |
| ಕಿರಿದು | ಕಿರಿಯವು<br>ಕಿರಿಯವುಗಳು | ಯಾವದು | ಯಾವವು<br>ಯಾವವುಗಳು |
| ಅಂಥದು | ಅಂಥವು<br>ಅಂಥವುಗಳು | ಎರಡನೆಯದು | ಎರಡನೆಯವು<br>ಎರಡನೆಯವುಗಳು |
| ನಾನು | ನಾವು<br>ನಾವುಗಳು | ತಾನು | ತಾವು<br>ತಾವುಗಳು |
| ದೊರೆ | ದೊರೆಗಳು | ಹೆಣ್ಣು | ಹೆಣ್ಣುಗಳು |
| ಜನ | ಜನಗಳು | ಮನೆ | ಮನೆಗಳು |

ನಾಮಪದಗಳಲ್ಲಿ 'ರು', 'ಆರು', 'ಅಂದಿರು', 'ವು', 'ಅವು', 'ಗಳು' – ಎಂಬಿವು ಬಹುವಚನದ ಗುರುತಾಗಿರುತ್ತವೆ. 'ಗಳು' ಎಂಬುದು 'ರು' ಮೊದಲಾದವುಗಳ ಜತೆಗೆ ಸೇರಿಯೂ ಬರುವುದುಂಟು.

## ಅಭ್ಯಾಸ 24

ಇವುಗಳ ಬಹುವಚನವೇನು?

**1.** ಎತ್ತು. **2.** ಗಾಡಿ. **3.** ಆಳು. **4.** ಮಗ. **5.** ನೀನು. **6.** ಅಂಥವಳು. **7.** ಯಾವನು. **8.** ವಾರ. **9.** ತಾಯಿ. **10.** ನಾಯಿ. **11.** ಅರಸು. **12.** ಹೊಸಬಳು. **13.** ಗಿಣಿ. **14.** ತಂಗಿ. **15.** ಮೈದುನ. **16.** ಏಣಿ. **17.** ಯಜಮಾನ. **18.** ಜತೆಗಾರ. **19.** ದೊಡ್ಡವನು. **20.** ಗಂಡ. **21.** ಹೆಂಡತಿ. **22.** ತಾನು. **23.** ನಮ್ಮವನು. **24.** ಗೆಳೆಯ. **25.** ಧಣಿ. **26.** ಬಡವ. **27.** ಮುಸಲ್ಮಾನ. **28.** ಕೆಂಪುಜನ. **29.** ಬ್ರಾಹ್ಮಣ **30.** ಹೆಳವ. **31.** ಮೂಕಿ. **32.** ಗಣಿ. **33.** ತಮ್ಮ. **34.** ಅಮ್ಮ. **35.** ನಮಸ್ಕಾರ. **36.** ಆಲದಮರ. **37.** ಕತ್ತಿ. **38.** ಅರಮನೆ. **39.** ರಾಕ್ಷಸ. **40.** ಕಾಡುಮರ.

**21.** ಈ ಕೆಳಗಿನ [4]ಪಟ್ಟಿಯಿಂದ ಕ್ರಿಯಾಪದಗಳ ಬಹುವಚನವಾಗುವ ರೀತಿಯನ್ನು ಹೇಳಿ.

---

[4] 11ನೆಯ ಪುಟದ ಟಿಪ್ಪಣಿಯನ್ನು ನೋಡಿ.

| ಏಕವಚನ | ಬಹುವಚನ | ಏಕವಚನ | ಬಹುವಚನ |
|---|---|---|---|
| ಮಾಡುತ್ತಾನೆ | ಮಾಡುತ್ತಾರೆ | ಬರುತ್ತಾಳೆ | ಬರುತ್ತಾರೆ |
| ಬರುತ್ತದೆ | ಬರುತ್ತವೆ | ಕೊಟ್ಟನು | ಕೊಟ್ಟರು |
| ಕೊಟ್ಟಳು | ಕೊಟ್ಟರು | ಕೊಟ್ಟಿತು | ಕೊಟ್ಟವು |
| ಮಾಡುತ್ತೀಯೆ | ಮಾಡುತ್ತೀರಿ | ಮಾಡುತ್ತೇನ | ಮಾಡುತ್ತೇವೆ |

ಕ್ರಿಯಾಪದಗಳಲ್ಲಿ 'ರ', 'ವ'–ಇವುಗಳು ಬಹುವಚನದ ಗುರುತುಗಳು.

## ಅಭ್ಯಾಸ 25

ಈ ವಾಕ್ಯಗಳಲ್ಲಿ ಕರ್ತೃಗಳ ಮತ್ತು ಕ್ರಿಯೆಗಳ ಲಿಂಗವನ್ನೂ ವಚನವನ್ನೂ ತಿಳಿಸಿ:

1. ಅದನ್ನು ನಾನು ಸಾಕುತ್ತೇನೆ. 2. ನಾನು ಕೂಗುತ್ತೇನೆ. 3. ನಾಯಿ ಬೊಗಳುತ್ತದೆ. 4. ಕಳ್ಳರು ಅಂಜುತ್ತಾರೆ. 5. ಹೊಸಬರು ಬರುತ್ತಾರೆ. 6. ಕುರಿಗಳು ಚದರುತ್ತವೆ. 7. ಕುದುರೆಗಳು ಕೆನೆಯುತ್ತವೆ. 8. ಜನರು ಸವಾರಿ ಮಾಡುತ್ತಾರೆ. 9. ಹುಡುಗನು ಹೋದನು. 10. ಆಕೆ ಕಸಾಗುಡಿಸಿದಳು. 11. ಸಿಡಿಲು ಹೊಡೆಯಿತು. 12. ರಾಮನು ಲಕ್ಷ್ಮಣನನ್ನು ಕರೆದನು. 13. ಒಂಟೆಗಳು ಭಾರವನ್ನು ಹೊರುತ್ತವೆ. 14. ಈ ಹಣ್ಣು ಹುಳಿಯಾಗಿದೆ. 15. ಮಕ್ಕಳು ಆಡುತ್ತಿವೆ. 16. ಅವನು ಸೀಸೆಯನ್ನು ಒಡೆದನು. 17. ವ್ಯಾಪಾರಿಯು ಗೆದ್ದನು. 18. ಪುರೋಹಿತನು ಮಂತ್ರವನ್ನು ಹೇಳಿದನು. 19. ಅರಸುಕುಮಾರನು ಸಿಟ್ಟುಗೊಂಡನು. 20. ಗುರುಗಳು ಎದ್ದರು.

22. ಈ ವಾಕ್ಯಗಳಲ್ಲಿ ಮಾತಾಡುವವನನ್ನು ಹೇಳುವ ಮಾತುಗಳು ಯಾವುವು? ಯಾರೊಡನೆ ಮಾತಾಡುತ್ತಾರೆಂಬುದನ್ನು ಹೇಳುವ ಮಾತುಗಳು ಯಾವುವು?

| | | |
|---|---|---|
| ನಾನು ಹಾಡುತ್ತೇನೆ. | | ನಾವು ಹಾಡುತ್ತೇವೆ. |
| ನೀನು ಹಾಡುತ್ತೀಯೆ. | ನೀವು ಹಾಡುತ್ತೀರಿ. | ತಾವು ಹಾಡುತ್ತೀರಿ. |

ಮಾತನಾಡುವವನನ್ನು ತೋರಿಸುವ ಮಾತಿಗೆ **ಉತ್ತಮ ಪುರುಷ**ವೆಂತಲೂ ಯಾರೊಡನೆ ಮಾತನಾಡುತ್ತೇವೆಂಬುದನ್ನು ಹೇಳುವ ಮಾತಿಗೆ **ಮಧ್ಯಮ ಪುರುಷ**ವೆಂತಲೂ ಹೆಸರು.

## ಅಭ್ಯಾಸ 26

ಈ ವಾಕ್ಯಗಳಲ್ಲಿ ಉತ್ತಮಪುರುಷದ ಮಾತುಗಳನ್ನೂ ಮಧ್ಯಮ ಪುರುಷದ ಮಾತುಗಳನ್ನೂ ವಿಂಗಡಿಸಿ ಬರೆಯಿರಿ.

1. ನಾನು ಹೇಳುತ್ತೇನೆ. 2. ನೀನು ಕೇಳು. 3. ನೀನು ಹಾಗೆ ಹೇಳುತ್ತೀಯೆ. 4. ನಾನು ಒಪ್ಪುವುದಿಲ್ಲ. 5. ಇತ್ತ ದಯಮಾಡಿಸಿ. 6. ರಾಮನೇ, ಎಂದು ಬಂದೆ? 7. ನಿನ್ನೆ ಬಂದೆನು.

8. ನಾವು ಕ್ಷೇಮ. 9. ನೀವು ಕ್ಷೇಮವೆ? 10. ತಾವು ಇರುತ್ತೀರಿ. 11. ನೀವು ಹೇಳಿದಿರಿ. 12. ನಾನು ಕೇಳಲಿಲ್ಲ.

23. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಮಾತನಾಡುವವನನ್ನೂ ಯಾರೊಡನೆ ಮಾತನಾಡುತ್ತಾನೋ ಅವನನ್ನೂ ಹೇಳದೆ, ಮೂರನೆಯವನನ್ನು ಹೇಳುವ ಮಾತುಗಳು ಯಾವುವು?

ರಾಮನೆ, ಎಂದು ಬಂದೆ?

ನಾನು ಬೆಳಗ್ಗೆ ಬಂದೆನು; ಅವನು ಈಗ ಬಂದನು.

ಕೃಷ್ಣನು ಯಾವಾಗ ಬಂದನು?

ಮಾತನಾಡುವವರಿಬ್ಬರನ್ನೂ ಬಿಟ್ಟು ಮೂರನೆಯವರನ್ನು ಹೇಳುವ ಮಾತುಗಳಿಗೆ ಪ್ರಥಮಪುರುಷವೆಂದು ಹೆಸರು.

## ಅಭ್ಯಾಸ 27

ಈ ವಾಕ್ಯಗಳಲ್ಲಿ ಪ್ರಥಮಪುರುಷದ ನಾಮಪದಗಳನ್ನೂ ಕ್ರಿಯಾಪದಗಳನ್ನೂ ಹೇಳಿ:

1. ನೀನು ಯಾರು? 2. ಆತನು ಎಲ್ಲಿ ಇರುವನು? 3. ಸೀತೆ ಎಲ್ಲಿ? 4. ಆಕೆ ಎಲ್ಲಿ ಇದ್ದಾಳೆ? 5. ಕುರಿಗಳು ಬ್ಯಾ ಎನ್ನುತ್ತವೆ. 6. ಅವು ಎಲ್ಲಿ ಇವೆ? 7. ನೀನು ದೋಸೆ ತಿಂದೆಯ? 8. ಅದು ಹಸಿ. 9. ಜನರು ಗುಂಪು ಸೇರಿದರು. 10. ದೊರೆಗಳು ದಯಮಾಡಿಸಿದರು. 11. ಇದು ಚಂಡು. 12. ಯಾರು ಕರೆದರು? 13. ಅಲ್ಲಿ ಏನು ಇದೆ? 14. ಇಂಥವರುಂಟೆ? 15. ಎಲ್ಲರೂ ಬರಲಿ. 16. ಹಿರಿಯವನು ಯಾರು?

## ಅಭ್ಯಾಸ 28

ಈ ವಾಕ್ಯಗಳಲ್ಲಿ ನಾಮಪದಗಳೂ ಕ್ರಿಯಾಪದಗಳೂ ಯಾವ ಪುರುಷ?

1. ಆಕೆಯು ಆಡುತ್ತಾಳೆ. 2. ನಾವು ಹರಗುತ್ತೇವೆ. 3. ನೀನು ಓಡುತ್ತೀಯೆ. 4. ನೀವು ಬಿತ್ತುತ್ತೀರಿ. 5. ಅವರು ಮಾರುತ್ತಾರೆ. 6. ತಾವು ದಯಮಾಡಿಸುತ್ತೀರಿ. 7. ಅದು ಬೀಳುತ್ತದೆ. 8. ನಾವು ಕೇಳುತ್ತೇವೆ. 9. ತಾವು ಹೇಳುತ್ತೀರಿ. 10. ಅವು ಕಾಣಿಸುತ್ತವೆ. 11. ನೀವು ಸೇರುತ್ತೀರಿ. 12. ಅವರು ಬರೆಯುತ್ತಾರೆ. 13. ಹುಡುಗರು ಹಾಡುತ್ತಾರೆ. 14. ನೀವು ಬರೆಯುತ್ತೀರಿ. 15. ಎಲೆಗಳು ಉದುರುತ್ತವೆ. 16. ಅಡಿಗೆ ಆಯಿತು.

24. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಕರ್ತೃಪದಗಳು ಮತ್ತು ಕ್ರಿಯಾಪದಗಳು ಯಾವ ವಚನ? ಯಾವ ಲಿಂಗ? ಯಾವ ಪುರುಷ?

| | |
|---|---|
| ನಾನು ಊಟ ಮಾಡಿದೆನು. | ನಾವು ಊಟ ಮಾಡಿದೆವು. |
| ನೀನು ಊಟ ಮಾಡಿದೆ. | ನೀವು ಊಟ ಮಾಡಿದಿರಿ.<br>ತಾವು ಊಟ ಮಾಡಿದಿರಿ. |
| ಅವನು ಊಟ ಮಾಡಿದನು.<br>ಅವಳು ಊಟ ಮಾಡಿದಳು.<br>ಆಕೆ ಊಟ ಮಾಡಿದಳು. | ಅವರೂ ಊಟ ಮಾಡಿದರು. |
| ಅದು ಊಟ ಮಾಡಿತು. | ಅವು ಊಟ ಮಾಡಿದವು. |

ಸಾಮಾನ್ಯವಾಗಿ ಕರ್ತೃಪದದ ಲಿಂಗವಚನಪುರುಷಗಳೇ ಕ್ರಿಯಾಪದಕ್ಕೂ ಇರುತ್ತವೆ.

### ಅಭ್ಯಾಸ 29

ಈ ಕೆಳಗಣ ನಾಮಪದವನ್ನು ಕರ್ತೃವಾಗಿ ವಾಕ್ಯದಲ್ಲಿ ಉಪಯೋಗಿಸಿ ಅವುಗಳ ಲಿಂಗ, ವಚನ, ಪುರುಷ—ಇವುಗಳನ್ನು ತಿಳಿಸಿ.

**1.** ರಾಮನು. **2.** ತಾವು. **3.** ಇವರು. **4.** ಇವು. **5.** ಎಂಥವರು. **6.** ಎಲ್ಲರು. **7.** ನಾವು. **8.** ನೀವು. **9.** ಅವರು. **10.** ಯಾರು. **11.** ಅವಳು. **12.** ಈಕೆ.

### ಅಭ್ಯಾಸ 30

ಇಲ್ಲಿರುವ ಕರ್ತೃಗಳ ಲಿಂಗವಚನಪುರುಷಗಳನ್ನು ತಿಳಿಸಿ:

**1.** ಪಕ್ಷಿಗಳು ಹಾರುತ್ತವೆ. **2.** ಇಲ್ಲಿ ನೊಣವಿದೆ. **3.** ಅವನು ಕಲ್ಲನ್ನು ಎಸೆಯುತ್ತಾನೆ. **4.** ನೀವು ತಂತಿಯನ್ನು ಎಳೆಯುತ್ತೀರಿ. **5.** ಅವರು ಹಸುವನ್ನು ಕರೆಯುತ್ತಾರೆ. **6.** ಆತನು ನಾಯಿಯನ್ನು ಹೊಡೆಯುತ್ತಾನೆ. **7.** ಆಕೆ ಅಳುತ್ತಾಳೆ. **8.** ಎಲ್ಲರೂ ಹೆದರುತ್ತಾರೆ. **9.** ಅವು ಏಳುತ್ತವೆ. **10.** ಅದು ಸೀಳುತ್ತದೆ. **11.** ಆತನು ಹೇಳುತ್ತಾನೆ. **12.** ಈತನು ಏನು ಅನ್ನುತ್ತಾನೆ? **13.** ಸೀತೆ ಹಾಡುತ್ತಾಳೆ. **14.** ರಾಮ ನೋಡುತ್ತಾನೆ. **15.** ಹಡಗು ಮುಳುಗುತ್ತದೆ. **16.** ಹಸುಗಳು ಎಲ್ಲಿ ಇವೆ?

# ಅಧ್ಯಾಯ 3

**25.** ಈ ವಾಕ್ಯಗಳಲ್ಲಿ 'ಕೊಡಲಿ' ಎಂಬ ಮಾತಿಗೆ ಎಷ್ಟು ರೂಪಗಳು ಬಂದಿವೆ?

| ಏಕವಚನ | ಬಹುವಚನ |
|---|---|
| ಈ ಕೊಡಲಿ ದೊಡ್ಡದು. | ಕೊಡಲಿಗಳು ದೊಡ್ಡವು. |

| | |
|---|---|
| ಕೊಡಲೀ, (ಕೊಡಲಿಯೆ,) ನೀನು ಗಟ್ಟಿಗ. | ಕೊಡಲಿಗಳೆ, ನೀವು ಗಟ್ಟಿಗರು. |
| ತಾರಯ್ಯ, ಕೊಡಲಿಯ (ಕೊಡಲಿಯನ್ನ). | ತಾರಯ್ಯ, ಕೊಡಲಿಗಳ. |
| ಕೊಡಲಿಯಿಂದ ಕಡಿಯುತ್ತಾರೆ. | ಕೊಡಲಿಗಳಿಂದ ಕಡಿಯುತ್ತಾರೆ. |
| ಕೊಡಲಿಗೆ ಕಾವು ಬೇಕು. | ಕೊಡಲಿಗಳಿಗೆ ಕಾವು ಬೇಕು. |
| ಕೊಡಲಿಯ ಕಾವು ಮುರಿದಿದೆ. | ಕೊಡಲಿಗಳ ಕಾವುಗಳು ಮುರಿದಿವೆ. |
| ಕೊಡಲಿಯಲ್ಲಿ ತುಕ್ಕು ಇದೆ. | ಕೊಡಲಿಗಳಲ್ಲಿ ತುಕ್ಕು ಇದೆ. |

ನಾಮಪದಗಳಿಗೆ ಬಹುವಚನದಲ್ಲಿಯೂ ಏಕವಚನದಲ್ಲಿಯೂ ಬೇರೆಬೇರೆ ಅರ್ಥದಲ್ಲಿ ಬರುವ ಬೇರೆಬೇರೆ ರೂಪಗಳಿಗೆ **ವಿಭಕ್ತಿ**ಗಳೆಂದು ಹೆಸರು.

ವಿಭಕ್ತಿಯ ಗುರುತುಗಳು ವಚನದ ಗುರುತುಗಳು ಸೇರಿದ ಮೇಲೆಯೇ ಸೇರುತ್ತವೆ.

## ಅಭ್ಯಾಸ 31

ಈ ವಾಕ್ಯಗಳಲ್ಲಿ ನಾಮಪದಗಳಿಗೆ ಸೇರಿರುವ ವಿಭಕ್ತಿಗಳ ಗುರುತುಗಳು ಇದ್ದರೆ ತಿಳಿಸಿ:—

1. ಮನೆಗೆ ಬೆಂಕಿ ಬಿತ್ತು. 2. ಕಟುಕರವನು ಕುರಿಯನ್ನು ಕೊಂದನು. 3. ಸಾಹುಕಾರನು ಮನೆಯನ್ನು ಬ್ರಾಹ್ಮಣನಿಗೆ ಕೊಟ್ಟನು. 4. ನಿನ್ನಿಂದ ನನಗೆ ಉಪಕಾರವಾಯಿತು. 5. ದೋಸೆಗೆ ತುಪ್ಪ ಬೇಕು. 6. ರಾಮನ ಮಾತನ್ನು ಕೇಳುತ್ತೀಯೊ? 7. ಆ ಊರಿಂದ ಈ ಊರಿಗೆ ಬಂದಿದ್ದಾರೆ. 8. ನಿಮ್ಮ ಮನೆಯಲ್ಲಿ ಎಷ್ಟು ಹಸುಗಳು ಹಾಲು ಕರೆಯುತ್ತವೆ? 9. ಕೆರೆಯಲ್ಲಿ ಕಪ್ಪೆಗಳು ಕೂಗುತ್ತಿದ್ದವು. 10. ಎಲ್ಲರೂ ಸಾವಿಗೆ ಅಂಜುತ್ತಾರೆ. 11. ರಾಮಯ್ಯ, ಇಲ್ಲಿ ಬಾ. 12. ರಾವಣನು ಸೀತೆಯನ್ನು ಕದ್ದನು. 13. ಹಲಗೆಯಮೇಲೆ ಬಳಪದಿಂದ ಬರೆಯುತ್ತಾರೆ. 14. ಜಪಾನರಾಜ್ಯದಿಂದ ನಮ್ಮ ದೇಶಕ್ಕೆ ದೀಪದಕಡ್ಡಿಯ ಪೊಟ್ಟಣಗಳು ಬರುತ್ತವೆ. 15. ಯುದ್ಧಗಳಲ್ಲಿ ಆಕಾಶವಿಮಾನಗಳನ್ನು ಕೆಲವರು ಉಪಯೋಗಿಸುತ್ತಾರೆ.

26. ಕೆಳಗಣ ವಾಕ್ಯಗಳಲ್ಲಿ ಕರ್ತೃಪದಗಳಿಗೆ ಸೇರಿರುವ ವಿಭಕ್ತಿಯ ಗುರುತುಗಳು ಯಾವುವು?

ರಾಮನು[1] (ರಾಮ) ಆಡುತ್ತಾನೆ.
ಕುರಿಯು (ಕುರಿ) ಬ್ಯಾ ಅನ್ನುತ್ತದೆ.
ಹಸುವು (ಹಸು) ಹಾಯುತ್ತದೆ.
ತೊಲೆಯು (ತೊಲೆ) ಬೀಳುತ್ತದೆ.

ಕರ್ತೃವಾಗಿ ಉಪಯೋಗವಾದ ನಾಮಪದಕ್ಕೆ 'ಉ' ಎಂಬುದು ವಿಭಕ್ತಿಯ ಗುರುತಾಗಿರುವುದು. ಈ ರೂಪಕ್ಕೆ **ಪ್ರಥಮಾವಿಭಕ್ತಿ**ಯೆಂದು ಹೆಸರು.

---

[1] ಒಂದು ಮಾತಿನ ಮುಂದಿನ ಕಂಸದಲ್ಲಿ ಮತ್ತೊಂದು ರೂಪವನ್ನು ಕೊಟ್ಟಿದ್ದರೆ ಅದು ಆಡುವ ಭಾಷೆಯಲ್ಲಿ ಹೆಚ್ಚು ರೂಢಿಯಾಗಿದೆಯೆಂದು ತಿಳಿಯಬೇಕು.

ಈ ವಿಭಕ್ತಿಯ ಗುರುತು ಬಾರದೆ ಇರುವುದೇ ಹೆಚ್ಚುವಾಡಿಕೆಯಾಗಿದೆ.

27. ಈ ವಾಕ್ಯಗಳಲ್ಲಿ ಕರ್ತೃವಿಗೆ ಸಂಬಂಧಪಟ್ಟ ನಾಮಪದಗಳು ಯಾವುವು? ಇವುಗಳಿಗೆ ವಿಭಕ್ತಿಯ ಗುರುತು ಯಾವುದು ಬಂದಿದೆ?

ಅವನು ಹುಡುಗನು (ಹುಡುಗ). ತೊಲೆ ದೊಡ್ಡದು.

ಸೀತೆ ಜಾಣೆ.

ಭೀಮರಾಯ—ಆ ತಂಟೆಕೋರ—ಹೀಗೆ ಮಾಡುತ್ತಾನೆ.

ಅವರು ಮೂರುಜನ ಬರುತ್ತಾರೆ.

ಕರ್ತೃವಿಗೆ ಸಂಬಂಧಪಟ್ಟ ಮಾತುಗಳು ಪ್ರಥಮಾವಿಭಕ್ತಿಯಲ್ಲಿಯೇ ಇರುತ್ತವೆ.

28. ಈ ವಾಕ್ಯಗಳಲ್ಲಿ ಕರ್ಮಪದಕ್ಕೆ ಸೇರಿರುವ ವಿಭಕ್ತಿಯ ಗುರುತುಗಳು ಯಾವುವು?

ತೋಳವು ಕುರಿಯನ್ನು ಕೊಲ್ಲುತ್ತದೆ.

ಅವನು ಬೂಂದು ಬೀಜವನ್ನು (ಬೂಂದುಬೀಜ) ಹುರಿಯುತ್ತಾನೆ.

ಕೇಳಿದೆಯ ಮಾತನ್ನ (ಮಾತ)?

ಕರ್ಮಪದಕ್ಕೆ[2] 'ಅ', 'ಅನ್ನ', 'ಅನ್ನು'—ಎಂಬ ವಿಭಕ್ತಿಯ ಗುರುತುಗಳು ಸೇರುತ್ತವೆ. ಯಾವ ಗುರುತೂ ಸೇರದೇ ಇರುವುದೂ ಉಂಟು. ನಾಮಪದದ ಈ ರೂಪಕ್ಕೆ ದ್ವಿತೀಯಾವಿಭಕ್ತಿಯೆಂದು ಹೆಸರು.

## ಅಭ್ಯಾಸ 32

ಇಲ್ಲಿರುವ ನಾಮಪದಗಳನ್ನೂ ಅವುಗಳ ವಿಭಕ್ತಿಗಳನ್ನೂ ಹೇಳಿ: 1. ಅವನು ನಿನ್ನನ್ನು ಹೊಡೆಯುತ್ತಾನೆ. 2. ಕೈ ಹಿಡಿಯುತ್ತೀಯ? 3. ಏನು ಕೇಳುತ್ತೀಯ? 4. ಅವನು ಎಷ್ಟು ಕೇಳುತ್ತಾನೆ? 5. ಕುದುರೆಗಳನ್ನು ಹೇಗೆ ಸಾಕುತ್ತಾರೆ? 6. ಯಾರನ್ನು ಯಾರು ಹೊಡೆದರು? 7. ಅಲ್ಲಿ ಏನು ಕಂಡೆ? 8. ಯಾರು ಎಸೆದರೊ ಈ ಕಲ್ಲನ್ನ? 9. ಮಗು ಕಾಳನ್ನು ಚಲ್ಲುತ್ತದೆ. 10. ಕವಿಯು ಪದ್ಯಗಳನ್ನು ಬರೆಯುತ್ತಾನೆ. 11. ಎಂಥದು ಬೇಕು? 12. ಇಂಥವನನ್ನು ಯಾರು ಮಾತಾಡಿಸುತ್ತಾರೆ?

29. ಈ ವಾಕ್ಯಗಳಲ್ಲಿ ಕೆಲಸಕ್ಕೆ ಬೇಕಾದ ಮುಖ್ಯವಾದ ಸಾಧನವನ್ನು ಹೇಳುವ ನಾಮಪದಗಳು ಯಾವುವು? ಇವುಗಳಿಗೆ ಸೇರಿರುವ ವಿಭಕ್ತಿಯ ಗುರುತು ಯಾವುದು?

ಪರುಶುರಾಮನು ಕೊಡಲಿಯಿಂದ ಶತ್ರುಗಳನ್ನು ಕೊಲ್ಲುತ್ತಾನೆ.

---

[2] ಕೆಲವರು 'ಅನ್ನು' ಎಂಬುದೊಂದೇ ಪ್ರತ್ಯಯವನ್ನು ಒಪ್ಪುತ್ತಾರೆ. ಆದರೆ ಚೆನ್ನಾಗಿ ನೋಡಿದರೆ ಅಕಾರವೇ ನಿಜವಾಗಿ ದ್ವಿತೀಯಾವಿಭಕ್ತಿಯ ಗುರುತಾಗಿ ಬಹುಕಾಲದಿಂದಲೂ ನಡೆದು ಬಂದಿದೆಯೆಂದು ಗೊತ್ತಾಗುವುದು. ನಕಾರವು ಹಳಗನ್ನಡದ ದ್ವಿತೀಯೆಯ ಅನುಸ್ವಾರಸ್ಥಾನದಲ್ಲಿ ಬಂದಿರುವುದು. ವಾಕ್ಯದ ಕೊನೆಯಲ್ಲಿರುವ ದ್ವಿತೀಯೆಗೆ ಅಕಾರವೇ ಹೆಚ್ಚು ಒಪ್ಪುವುದು.

ರೈತನು ನೇಗಲಿನಿಂದ ಉಳುತ್ತಾನೆ.
ಎಲ್ಲರೂ ಕಣ್ಣಿನಿಂದ ನೋಡುತ್ತಾರೆ.

ಕೆಲಸಕ್ಕೆ ಬೇಕಾದ ಮುಖ್ಯವಾದ[3] ಸಾಧನವನ್ನು ಹೇಳುವ ನಾಮಪದಗಳಿಗೆ 'ಇಂದ' ಎಂಬ ವಿಭಕ್ತಿಯ ಗುರುತು ಸೇರುತ್ತದೆ. ಈ ರೂಪಕ್ಕೆ **ತೃತೀಯಾವಿಭಕ್ತಿ**ಯೆಂದು ಹೆಸರು.

## ಅಭ್ಯಾಸ 33

ಈ ಕೆಳಗಣ ತೃತೀಯಾವಿಭಕ್ತಿಯ ನಾಮಪದಗಳನ್ನು ವಾಕ್ಯದಲ್ಲಿ ಉಪಯೋಗಿಸಿ:

1. ಕಿವಿಯಿಂದ. 2. ಉಳಿಯಿಂದ. 3. ಕತ್ತಿಯಿಂದ. 4. ಬಾಚಿಯಿಂದ. 5. ಲೇಖನಿಯಿಂದ. 6. ಸೌಟಿನಿಂದ. 7. ಹಾರೆಯಿಂದ. 8. ಚಾಕಿನಿಂದ.

30. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಯಾರಿಗೋಸ್ಕರ ಕೆಲಸವಾಗುತ್ತದೆ? ಇದನ್ನು ಹೇಳುವ ಮಾತಿಗೆ ಸೇರಿರುವ ವಿಭಕ್ತಿಯ ಗುರುತೇನು?

ರಾಮನಿಗೆ ಒಂದು ಪುಸ್ತಕವನ್ನು ಕೊಡುತ್ತೇನೆ.
ತಂದೆಯು ಮಗನಿಗೆ ಒಂದು ಅಂಗಿ ಹೊಲಿಸುತ್ತಾನೆ.
ನೀನು ಏತಕ್ಕೆ (ಏಕೆ) ಅಳುತ್ತೀಯೆ?
ತೋಟಗಾರನು ಗಿಡಕ್ಕೆ ನೀರು ಹಾಕುತ್ತಾನೆ.
ಆ ನರಿಗೆ ಬಾಲವಿಲ್ಲ.
ಒಂದಕ್ಕೆ ಎರಡು ಕೊಡುತ್ತೇನೆ.

ಯಾರಿಗಾಗಿ ಕೆಲಸ ನಡೆಯುತ್ತದೆ ಎಂಬುದನ್ನು ತೋರಿಸುವುದಕ್ಕೆ 'ಗ', 'ಕೆ', 'ಕ್ಕೆ',—ಎಂಬ ವಿಭಕ್ತಿಯ ಗುರುತುಗಳು ಬರುತ್ತವೆ. ಇವುಗಳ ಹಿಂದೆ 'ಅ' ಎಂಬ ಅಕ್ಷರವಾಗಲಿ 'ಇ' ಎಂಬ ಅಕ್ಷರವಾಗಲಿ ಕೆಲವು ಕಡೆ ಸೇರಿರುವುದು. ಈ ರೂಪವನ್ನು **ಚತುರ್ಥೀವಿಭಕ್ತಿ**ಯೆನ್ನುತ್ತಾರೆ.

## ಅಭ್ಯಾಸ 34

ಈ ಚತುರ್ಥೀವಿಭಕ್ತಿಗಳನ್ನು ವಾಕ್ಯದಲ್ಲಿ ಉಪಯೋಗಿಸಿ: 1. ಮನೆಗೆ. 2. ಪುಸ್ತಕಕ್ಕೆ. 3. ಹುಡುಗರಿಗೆ. 4. ಬೆರಳಿಗೆ. 5. ಉಂಗುರಕ್ಕೆ. 6. ಅಕ್ಕಿಗೆ. 7. ಹಸುವಿಗೆ. 8. ಹಣ್ಣಿಗೆ. 9. ಮೂರಕ್ಕೆ.

31. ಈ ಕೆಳಗಣ ವಾಕ್ಯಗಳಲ್ಲಿ 'ಇಂದ' ಎಂಬ ವಿಭಕ್ತಿಯ ಗುರುತು ಏನನ್ನು ತೋರಿಸುತ್ತದೆ?

---

[3] ಪಾಠ ಹೇಳುವವರ ಸೌಕರ್ಯಕ್ಕಾಗಿ ವಿಭಕ್ತಿಗಳಿಗೆ ಒಂದೊಂದೇ ಅರ್ಥವನ್ನು ತಿಳಿಸಿರುತ್ತದೆ.

ಮರದಿಂದ ಹಣ್ಣುಗಳು ಉದುರಿದವು.

ರಾಮನು ಊರಿಂದ ಹೊರಡುತ್ತಾನೆ.

ಆಳು ಕುದುರೆಯಿಂದ ಬಿದ್ದನು.

ಅಗಲುವಿಕೆಯನ್ನು ತೋರಿಸುವ[4] ಇಂದ ಎಂಬ ಗುರುತಿರುವ ನಾಮಪದದ ರೂಪಕ್ಕೆ **ಪಂಚಮೀವಿಭಕ್ತಿ**ಯೆಂದು ಹೆಸರು.

**32.** ಈ ಕೆಳಗೆ ಇರುವ ವಾಕ್ಯಗಳಲ್ಲಿ ಯಾರದು ಎಂಬುದನ್ನು ತೋರಿಸುವ ನಾಮಪದದ ರೂಪಗಳು ಯಾವುವು? ಅವುಗಳಿಗೆ ವಿಭಕ್ತಿಯ ಗುರುತೇನು?

ರಾಮನ ಮನೆ ಚಿಕ್ಕದು.

ನಿನ್ನ ಬಳಪ ಮುರಿಯುತ್ತದೆ.

ಸಂಬಂಧವನ್ನು ಹೇಳುವ ನಾಮಪದಗಳಿಗೆ 'ಅ' ಎಂಬ ವಿಭಕ್ತಿಯ ಗುರುತು ಸೇರುತ್ತದೆ. ಈ ನಾಮಪದದ ರೂಪಕ್ಕೆ[5] **ಷಷ್ಠೀವಿಭಕ್ತಿ**ಯೆಂದು ಹೆಸರು.

## ಅಭ್ಯಾಸ 35

ಈ ಪಂಚಮೀಷಷ್ಠೀವಿಭಕ್ತಿಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿ:

**1.** ಚಂದ್ರನ. **2.** ಎಲ್ಲಿಂದ. **3.** ಬಾಬಾಬುಡ್ಡ ಪರ್ವತದಿಂದ. **4.** ಮೇಜಿನ. **5.** ಅಂಥ ವನ. **6.** ಆಕಾಶದಿಂದ. **7.** ಮಾವಿನಮರದ. **8.** ತೋಟಗಾರನ.

**33.** ಈ ವಾಕ್ಯಗಳಲ್ಲಿ 'ಎಲ್ಲಿ' ಎಂಬುದನ್ನು ಹೇಳುವ ನಾಮಪದಗಳು ಯಾವುವು? ಅವುಗಳ ಕೊನೆಯಲ್ಲಿ ಯಾವ ಮಾತಿದೆ?

ಪೆಟ್ಟಿಗೆಯಲ್ಲಿ ಹಣ್ಣುಗಳಿವೆ.

ಆ ಊರಲ್ಲಿ ಬ್ರಾಹ್ಮಣರಿಲ್ಲ.

ಒಂದು ಕಡೆ ಅವರೆಲ್ಲ ಸೇರಿದ್ದರು.

---

[4] 'ದೆಸೆಯಿಂದ' ಎಂಬುದು ಪ್ರತ್ಯಯವಲ್ಲವಾದುದರಿಂದ ಅದನ್ನು ಬಿಟ್ಟದೆ. ಪಂಚಮೀ ವಿಭಕ್ತಿಗೂ ತೃತೀಯಾ-ವಿಭಕ್ತಿಗೂ ರೂಪದಲ್ಲಿ ಭೇದವಿಲ್ಲವೆಂಬುದನ್ನು ಮಕ್ಕಳಿಂದ ಹೇಳಿಸಬೇಕು.

[5] ಈ ವಿಭಕ್ತಿಯ ಮುಂದೆ 'ದೆಸೆಯಿಂದ', 'ಕಡೆಯಿಂದ', 'ಅತ್ತಲಿಂದ'–ಎಂಬ ಪದಗಳನ್ನಿಟ್ಟರೂ ಪಂಚಮಿಯ ಅರ್ಥವು ತೋರುವುದು.

'ಮರದ ದೆಸೆಯಿಂದ', 'ಶತ್ರುಗಳ ಕಡೆಯಿಂದ', 'ನದಿಯತ್ತಲಿಂದ' ಇಂಥವು ಎರಡೆರಡು ಮಾತುಗಳೆಂಬುದನ್ನು ಹುಡುಗರಿಗೆ ಪುನರಾವೃತ್ತಿಯಕಾಲಕ್ಕೆ ತಿಳಿಸಬೇಕು.

'ಎಲ್ಲಿ' ಎಂಬುದನ್ನು ಹೇಳುವ ನಾಮಪದದ ರೂಪಕ್ಕೆ **ಸಪ್ತಮೀವಿಭಕ್ತಿ**ಯೆಂದು ಹೆಸರು. [6]'ಅಲ್ಲಿ' ಎಂಬುದೇ ಈ ವಿಭಕ್ತಿಯ ಗುರುತು.

ಇದಕ್ಕೆ ಗುರುತಿಲ್ಲದೆ ಇರುವುದೂ ಉಂಟು.

## ಅಭ್ಯಾಸ 36

ಈ ಸಪ್ತಮೀವಿಭಕ್ತಿಗಳನ್ನು ಉಪಯೋಗಿಸಿ ವಾಕ್ಯಗಳನ್ನು ಮಾಡಿ:

1. ತಪ್ಪಲೆಯಲ್ಲಿ. 2. ನೀರಿನಲ್ಲಿ. 3. ಪುಸ್ತಕದಲ್ಲಿ. 4. ಜುಟ್ಟಿನಲ್ಲಿ. 5. ಹಣ್ಣಿನಲ್ಲಿ. 6. ಹಾಲಿನಲ್ಲಿ. 7. ಒರಳಿನಲ್ಲಿ. 8. ಮಡಕೆಯಲ್ಲಿ.

**34.** ಈ ವಾಕ್ಯಗಳಲ್ಲಿ ಒಬ್ಬರನ್ನು ಕರೆಯುವುದಕ್ಕೆ ಉಪಯೋಗಿಸಿರುವ ಮಾತುಗಳು ಯಾವುವು? ಅವುಗಳ ವಿಭಕ್ತಿಯ ಗುರುತುಗಳನ್ನು ತಿಳಿಸಿ:

ತಂಗಿ (ತಂಗೀ), ನಿನ್ನ ಹೆಸರೇನು?
ಮಕ್ಕಳೆ (ಮಕ್ಕಳೇ, ಮಕ್ಕಳಿರ, ಮಕ್ಕಳಿರಾ), ಇಲ್ಲಿ ಬನ್ನಿ.
ಮಗು (ಮಗೂ, ಮಗುವೆ, ಮಗುವೇ), ಏನು ಮಾಡುತ್ತೀಯೆ?
ಕಣ್ಣೆ (ಕಣ್ಣೇ), ನಿನ್ನ ಗತಿಯೇನು?
ಅಣ್ಣಂದಿರ (ಅಣ್ಣಂದಿರಾ), ನನ್ನ ಮಾತು ಕೇಳಿ.

ಒಬ್ಬರನ್ನು ಕರೆಯುವದನ್ನು ಸೂಚಿಸುವುದಕ್ಕೆ 'ಎ', 'ಏ', 'ಇ', 'ಇರಾ'– ಎಂಬ ವಿಭಕ್ತಿಯ ಗುರುತುಗಳು ಬರುತ್ತವೆ.

ಇಲ್ಲದಿದ್ದರೆ ನಾಮಪದವನ್ನು ಕೊನೆಯಲ್ಲಿ ಎಳೆದು ಉಚ್ಚರಿಸಿದರೂ ಆಗುತ್ತದೆ. ಯಾವ ಗುರುತೂ ಇಲ್ಲದೆಯೂ ಉಪಯೋಗಿಸುವುದುಂಟು. ಈ ರೂಪಕ್ಕೆ **ಸಂಬೋಧನ ವಿಭಕ್ತಿ**ಯೆಂದು ಹೆಸರು.

## ಅಭ್ಯಾಸ 37

ಇವುಗಳ ಸಂಬೋಧನವಿಭಕ್ತಿಯ ರೂಪಗಳನ್ನು ವಾಕ್ಯದಲ್ಲಿ ಉಪಯೋಗಿಸಿ:

1. ಕರು. 2. ಅಣ್ಣ. 3. ಭಾವಂದಿರು. 4. ಜನಗಳು. 5. ಹುಚ್ಚಿ.

## ಅಭ್ಯಾಸ 38

ಈ ವಾಕ್ಯಗಳಿರುವ ನಾಮಪದಗಳ ಲಿಂಗ, ವಿಭಕ್ತಿ, ವಚನ—ಇವುಗಳನ್ನು ತಿಳಿಸಿ:

---

[6]'ಅಲ್ಲಿ' ಎಂಬುದು ನಿಜವಾಗಿ ಬೇರೊಂದು ಪದವೇ ಹೊರತು ವಿಭಕ್ತಿಪ್ರತ್ಯಯವಲ್ಲವೆಂದು ತೋರುವುದು. ಏಕೆಂದರೆ ವಿಭಕ್ತಿಪ್ರತ್ಯಯಗಳ ಮೇಲೆ ವಿಭಕ್ತಿಪ್ರತ್ಯಯಗಳು ಸೇರುವುದಿಲ್ಲ. ಆದರೆ 'ರಾಮನಲ್ಲಿಗೆ' 'ಏಮ್ಮಲ್ಲಿಂದ' 'ಆ ಊರಲ್ಲಿಯ' ಎಂದು 'ಅಲ್ಲಿ' ಯ ಮೇಲೆ ಚತುರ್ಥೀಪಂಚಮೀಷಷ್ಠೀ ಪ್ರತ್ಯಯಗಳು ಸೇರುತ್ತವೆ.

1. ಉಪಾಧ್ಯಾಯನು ಮಕ್ಕಳಿಗೆ ಪಾಠವನ್ನು ಕಲಿಸುತ್ತಾನೆ. 2. ಈ ಸಂಗತಿಯು ನವಾಬರ ಕಾಲದಲ್ಲಿ ನಡೆಯಿತು. 3. ಹಿಮಸಾರಂಗವು ಚಳಿಯ ದೇಶಗಳಲ್ಲಿ ವಾಸಮಾಡುತ್ತದೆ. 4. ಗೂಬೆಯನ್ನು ನೋಡಿದ್ದೀರೋ? 5. ಅದಕ್ಕೆ ದೊಡ್ಡಕಣ್ಣುಗಳು ಇವೆ. 6. ಗೂಬೆಯು ಟೊಳ್ಳುಮರದಲ್ಲಿ ಗೂಡನ್ನು ಕಟ್ಟುತ್ತದೆ. 7. ನಾಲ್ಕಾರು ಕಡ್ಡಿಗಳನ್ನು ತಾ. 8. ಒಂಟೆಯು ಮರುಭೂಮಿಗೆ ಹಡಗಿನಂತೆ ಇರುವದು. 9. ಒಂಟೆಯ ಕಣ್ಣನ್ನು ನೋಡಿ. 10. ಅದರ ಮೇಲೆ ಹುಬ್ಬು ಜೋಲುತ್ತಿದೆ. 11. ಸಾಗರವು ಭೂಮಿಯ ಸುತ್ತಲೂ ಇದೆ. 12. ಭೀಮನಿಗೆ ಧರ್ಮರಾಯನು ಅಣ್ಣನು. 13. ಹುಡುಗನು ಅಲ್ಲಿಂದ ಬಂದನು. 14. ಮನೆಯಲ್ಲಿ ಯಜಮಾನರಿಲ್ಲ. 15. ನಿಮ್ಮ ಅಭಿಪ್ರಾಯವೇನು? 16. ನಾನೆಂದಿಗೂ ಬಿಡುವುದಿಲ್ಲ. 17. ಯಾರನ್ನ? ನಿಮ್ಮ ಹುಡುಗರನ್ನ. ಅದೇಕೆ? 18. ಎಲ್ಲರಿಗೂ ಒಳ್ಳೆಯದು ಆಗಲಿ. 19. ದೇಶದಲ್ಲಿ ಚೆನ್ನಾಗಿ ಮಳೆ ಆಗಿದೆ. 20. ನಾನೇನು ಮಾಡಲಿ?

## ಅಭ್ಯಾಸ 39

ಇಲ್ಲಿ ವಿಭಕ್ತಿಯ[7] ಗುರುತಿಲ್ಲದ ನಾಮಪದಗಳು ಯಾವುವು? ಅವು ಯಾವ ವಿಭಕ್ತಿ? ಆಯಾವಿಭಕ್ತಿಯ ಗುರುತುಗಳನ್ನು ಸೇರಿಸಿ.

1. ಇದು ಚಂಡು. 2. ಎಲ್ಲಿಯೊ ನಿಮ್ಮಪ್ಪ? 3. ಅವನಿಗೆ ಒಂದು ಏಟು ಕೊಡು. 4. ಅಪ್ಪ, ಎಲ್ಲಿ ಹೋಗಿದ್ದೆ? 5. ನಿನ್ನ ಮಾತು ಸುಳ್ಳು. 6. ದೋಸೆಗೆ ತುಪ್ಪಬೇಕು. 7. ಹಣ್ಣು ಬೇಕೆ, ಹಣ್ಣು? 8. ಒಂದು ದಿನ ಮಾವನೂ ಅಳಿಯನೂ ಸೇರಿದರು. 9. ರಾಮನ ಎಡಗಡೆ ಸೀತೆ, ಬಲಗಡೆ ಲಕ್ಷ್ಮಣ. 10. ಅವನು ಸೋಮವಾರ ಬರುತ್ತಾನೆ.

# ಅಧ್ಯಾಯ 4

35. ಈ ಕೆಳಗಣ ಕ್ರಿಯೆಗಳು ಯಾವ ಕಾಲವನ್ನು ಹೇಳುತ್ತವೆ?

| | |
|---|---|
| ಹೋಗುತ್ತಾನೆ, ಹೋಗುತ್ತಾಳೆ. | ಹೋಗುತ್ತಾರೆ. |
| ಹೋಗುತ್ತದೆ. | ಹೋಗುತ್ತವೆ. |
| ಹೋಗುತ್ತೇನೆ. | ಹೋಗುತ್ತೇವೆ. |
| ಹೋಗುತ್ತೀಯೆ (ಹೋಗುತ್ತೀ). | ಹೋಗುತ್ತೀರಿ. |

ಕ್ರಿಯಾಪದಗಳಲ್ಲಿ 'ಉತ್ತ' ಎಂಬ ಗುರುತು ಇದ್ದರೆ ಅದು ಈಗಿನ ಕಾಲವನ್ನು ಹೇಳುತ್ತದೆ. ಇದಕ್ಕೆ ವರ್ತಮಾನಕಾಲವೆನ್ನುತ್ತಾರೆ. ಕಾಲದ ಗುರುತು ಪುರುಷದ ಗುರುತಿನ ಹಿಂದುಗಡೆ ಬರುತ್ತದೆ.

---

[7] ಗುರುತುಗಳಿಲ್ಲದೆ ಉಪಯೋಗಿಸುವ ನಾಮಪದಗಳ ವಿಭಕ್ತಿಗಳನ್ನು ಅರ್ಥದಿಂದಲೇ ಗೊತ್ತು ಹಿಡಿಯಬೇಕೆಂದು ತಿಳಿಸಬೇಕು.

## ಅಭ್ಯಾಸ 40

ಇವುಗಳ ವರ್ತಮಾನ ರೂಪಗಳನ್ನು ಬೇರೆ ಬೇರೆ ವಾಕ್ಯಗಳಲ್ಲಿ ಉಪಯೋಗಿಸಿ:

1. ಮಾಡು. 2. ಬಿಡು. 3. ಕೊಡು. 4. ನಿಲ್ಲು. 5, ಏಳು. 6. ನೋಡು.

**36.** ಈ ಕೆಳಗಣ ಕ್ರಿಯಾಪದಗಳು ಯಾವ ಕಾಲವನ್ನು ಹೇಳುತ್ತವೆ? ಆ ಕಾಲದ ಗುರುತು ಯಾವುದು?

| | |
|---|---|
| ಮಾಡಿದನು (ಮಾಡಿದ) | ಮಾಡಿದರು |
| ಮಾಡಿದಳು | [1]ಮಾಡಿದುವು (ಮಾಡಿದವು) |
| ಮಾಡಿದೆ | ಮಾಡಿದಿರಿ |
| ಮಾಡಿದೆನು (ಮಾಡಿದೆ) | ಮಾಡಿದೆವು |

ಆಗಿಹೋದ ಕಾಲವನ್ನು ಸಾಮಾನ್ಯವಾಗಿ ದಕಾರವು ಸೂಚಿಸುವುದು. ಇದಕ್ಕೆ **ಭೂತಕಾಲವೆನ್ನುತ್ತಾರೆ.** ನಪುಂಸಕಲಿಂಗದ ಏಕವಚನದಲ್ಲಿ ತಕಾರವು ಈ ಕಾಲದ ಗುರುತಾಗಿರುವುದು.

## ಅಭ್ಯಾಸ 41

ಇವುಗಳ ಭೂತಕಾಲಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿರಿ.

1. ಹೇಳು. 2. ನಡೆ. 3. ಹಾಡು. 4. ಸುರಿ. 5. ಕೇಳು. 6. ನೋಡು.

**37.** ಈ ಕ್ರಿಯಾಪದಗಳು ಯಾವ ಕಾಲವನ್ನು ಹೇಳುತ್ತವೆ?

| | |
|---|---|
| ಮಾಡುವನು (ಮಾಡುವಳು) | ಮಾಡುವರು |
| ಮಾಡುವುದು (ಮಾಡುವದು) | ಮಾಡುವುವು (ಮಾಡುವವು) |

ವಕಾರವು ಬರುವ ಕಾಲವನ್ನು ಸೂಚಿಸುತ್ತದೆ. ಇದಕ್ಕೆ ಭವಿಷ್ಯತ್ಕಾಲವೆಂದು ಹೆಸರು.

## ಅಭ್ಯಾಸ 42

ಇವುಗಳ[2] ಭವಿಷ್ಯತ್ಕಾಲದ ರೂಪಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿ ಬರೆಯಿರಿ.

1. ಬರು. 2. ಕೊಡು. 3. ಸಾಕು. 4. ನೋಡು. 5. ಕೇಳು. 6. ಹಾಡು.

---

[1] 'ಉದು', 'ಉವು' ಎಂಬ ಪ್ರತ್ಯಯಗಳ ಸ್ಥಾನವನ್ನು ಹೊಸಗನ್ನಡದಲ್ಲಿ 'ಅದು' 'ಅವು' ಎಂಬಿವು ಆಕ್ರಮಿಸಿಕೊಳ್ಳುತ್ತಿವೆ.

[2] ಮಕ್ಕಳಿಗೆ ಮೊದಲು ಅರ್ಥದ ಮೇಲೆ ಕಾಲವನ್ನು ತಿಳಿದುಕೊಳ್ಳುವುದಕ್ಕೂ ಕಾಲ ಸೂಚಕವಾದ ಆಗಮಗಳನ್ನು ತಿಳಿದುಕೊಳ್ಳುವುದಕ್ಕೂ ಬಂದರೆ ಸಾಕು.

## ಅಭ್ಯಾಸ 43

ಈ ವಾಕ್ಯಗಳಲ್ಲಿರುವ ಕ್ರಿಯಾಪದಗಳು ಯಾವ ಕಾಲ?

**1.** ಬೇಸಿಗೆಯಲ್ಲಿ ಮೈ ಬೆವರುತ್ತದೆ. **2.** ಅವನ ಕಣ್ಣು ಕೆಂಪೇರಿತು. **3.** ಹುಲಿಯ ನೆರಳು ನೀರಿನಲ್ಲಿ ಬಿತ್ತು. **4.** ನಾಳೆ ಸೋಮವಾರವಾಗುವುದು. ೫. ಹತ್ತುಗಂಟೆ ಆಯಿತು. **5.** ಈ ಕೆಲಸ ಒಂದು ವಾರಕ್ಕೆ ಮುಗಿಯುವುದು. **6.** ಹುಡುಗರು ಎಲ್ಲಿ ಆಡುತ್ತಾರೆ? **7.** ಬೆಕ್ಕು ನೆಲುವಿನ ಕಡೆ ನೋಡುತ್ತದೆ. **8.** ಮಣ್ಣು ಕಾಲಿಗೆ ಹತ್ತುತ್ತದೆ. **9.** ಬೆಂಕಿ ಸುಡುತ್ತದೆ. **10.** ಭರತನು ರಾಮನಿಗೆ ಅಡ್ಡಬಿದ್ದನು. **11.** ಬೆಂಕೀಕಡ್ಡಿ ಚೆನ್ನಾಗಿ ಹತ್ತುತ್ತದೆಯೋ? **12.** ನಿನಗೆ ಎಂಟು ವರ್ಷ ಎಂದಿಗೆ ತುಂಬುವುದು? **13.** ಅಯ್ಯೋ! ಕಳ್ಳರು ನುಗ್ಗಿದರು. **14.** ಪೋಲೀಸಿನವರು ಎಲ್ಲಿದಾರೆ? **15.** ನಿಮಗೆ ಭಯವಿಲ್ಲ.

## ಅಭ್ಯಾಸ 44

ಈ ಕೆಳಗಣ ವಾಕ್ಯಗಳ ಕ್ರಿಯಾಪದಗಳನ್ನು ಭೂತಕಾಲಕ್ಕೂ ಭವಿಷ್ಯತ್ಕಾಲಕ್ಕೂ ತಿರುಗಿಸಿ ಬೇರೆಬೇರೆ ವಾಕ್ಯಗಳನ್ನು ಬರೆಯಿರಿ:

**1.** ಅಲ್ಲಿ ಒಂದು ಪುಸ್ತಕ ಕಾಣುತ್ತದೆ. **2.** ಅವರು ನಿಮ್ಮನ್ನು ಪ್ರೀತಿಸುತ್ತಾರೆ. **3.** ಉಪಾಧ್ಯಾಯರು ಹುಡುಗರನ್ನು ಹೊಗಳುತ್ತಾರೆ. **4.** ನಾಯಿ ಅವನನ್ನು ಕಚ್ಚುತ್ತದೆ. **5.** ರಾಮನು ತಂಗಿಯನ್ನು ಪೀಡಿಸುತ್ತಾನೆ. **6.** ಬ್ರಾಹ್ಮಣರು ನದಿಯಲ್ಲಿ ಸ್ನಾನಮಾಡುತ್ತಾರೆ. **7.** ಶೆಟ್ಟಿ ಆಳನ್ನು ಬಯ್ಯುತ್ತಾನೆ. **8.** ನಾವು ಮನೆಗೆ ಹೋಗುತ್ತೇವೆ. **9.** ನಿನಗೆ ಬಹುಮಾನ ಕೊಡುತ್ತೇನೆ. **10.** ಸೂರ್ಯನು ಬಿಸಿಲು ಕೊಡುತ್ತಾನೆ. **11.** ನಮ್ಮಪ್ಪ ಮಿಠಾಯಿ ತರುತ್ತಾನೆ. **12.** ಬೆಕ್ಕಿನ ಮರಿಗಳು ಓಡುತ್ತವೆ.

**38.** ಈ ವಾಕ್ಯಗಳಲ್ಲಿ ಅಪ್ಪಣೆಯನ್ನು ಅಥವಾ ಸೂಚನೆಯನ್ನು ಮಾಡುವ ಕ್ರಿಯಾಪದಗಳು ಯಾವುವು?

| | |
|---|---|
| ಹುಡುಗರು ಇಲ್ಲಿ ಇರಲಿ. | ಹುಡುಗಿಯೂ ಇರಲಿ. |
| ನೀನು ಇದನ್ನು ಬರೆ (ಬರಿ). | ನೀವು ಇನ್ನೊಂದು ಬರೆಯಿರಿ. |
| ನಾನೂ ನೀನೂ ಆಡೋಣ. | |

ಅಪ್ಪಣೆ, ಸೂಚನೆ, ಇಚ್ಛೆ ಮೊದಲಾದ ಅರ್ಥವನ್ನು ಹೇಳುವ ಕ್ರಿಯಾಪದದ ರೂಪಕ್ಕೆ ವಿಧ್ಯಾದ್ಯರ್ಥಕವೆಂದು ಹೆಸರು. ಇವುಗಳಿಗೆ ಮುಖ್ಯವಾಗಿ "ಅಲಿ", "ಇ", "ಇರಿ", "ಓಣ"—ಎಂಬ ಗುರುತುಗಳು ಸೇರುತ್ತವೆ.

## ಅಭ್ಯಾಸ 45

ಇವುಗಳಿಗೆ ವಿಧ್ಯಾದ್ಯರ್ಥಕ ಕ್ರಿಯಾಪದಗಳನ್ನು ಸೇರಿಸಿ ವಾಕ್ಯಗಳನ್ನು ಮಾಡಿರಿ:

**1.** ಆಳು. **2.** ಆಕೆ. **3.** ನೀವು. **4.** ನಾವು. **5.** ಬೆಳಕು. **6.** ರಾಮನು. **7.** ದೇವರು. **8.** ಅರಸರು.

39. ಈ ವಾಕ್ಯಗಳಲ್ಲಿ ಕೆಲಸವನ್ನು ಮಾಡುವುದಿಲ್ಲವೆಂಬ ಅರ್ಥದ ಕ್ರಿಯಾರೂಪಗಳು ಯಾವುವು?

| | |
|---|---|
| ಈ ಕೆಲಸವನ್ನು ಅವನು ಮಾಡನು. | ಅದನ್ನು ನಾನು ಕಾಣೆನು (ಕಾಣೆ). |
| ನೀನು ಕೊಡೆ. | ಅವನು ಬಿಡನು (ಬಿಡ). |
| ಇದು ನನಗೆ ತಿಳಿಯದು. | ಪಶುಗಳು ಏನೂ ತಿಳಿಯವು. |

ಕೆಲಸವನ್ನು ಮಾಡುವುದಿಲ್ಲವೆಂಬ ಅರ್ಥವನ್ನು ಹೇಳುವ ಕ್ರಿಯಾರೂಪಕ್ಕೆ **ನಿಷೇಧರೂಪವೆಂದು** ಹೆಸರು.

ಈ ರೂಪಕ್ಕೆ ಪುರುಷದ ಗುರುತುಗಳನ್ನು ಬಿಟ್ಟರೆ ನಿಷೇಧದ ಅರ್ಥವನ್ನು ತೋರಿಸುವ ಹೊಸ ಗುರುತು ಯಾವುದೂ ಇರುವುದಿಲ್ಲ.

## ಅಭ್ಯಾಸ 46

ಈ ವಾಕ್ಯಗಳ ಕ್ರಿಯಾಪದಗಳನ್ನು ನಿಷೇಧರೂಪಕ್ಕೆ ತಿರುಗಿಸಿ.

1. ಸೀತೆಯು ಬರುತ್ತಾಳೆ. 2. ಸಂಗೀತಗಾರನು ಹಾಡುತ್ತಾನೆ. 3. ಅವನು ನನ್ನ ಮಾತು ಕೇಳುತ್ತಾನೆ. 4. ಅವನು ಒಂದು ಗಳಿಗೆ ಇರುತ್ತಾನೆ. 5. ಸಾಹುಕಾರ ಹುಲಿಗೆ ಹೆದರುತ್ತಾನೆ. 6. ಅವನು ಮಕ್ಕಳನ್ನು ಹೊಡೆಯುತ್ತಾನೆ. 7. ಹುಡುಗರು ಓದುತ್ತಾರೆ. 8. ಹಾವು ಸಾಯುತ್ತದೆ. 9. ಕೋಲು ಮುರಿಯುತ್ತದೆ. 10. ನಿನಗೆ ಇದು ಸಲ್ಲುತ್ತದೆ. 11. ಅವನಿಗೆ ಹಾಲು ಸೇರುತ್ತದೆ. 12. ನೀವು ಹೋಗುತ್ತೀರಿ. 13. ನೀನು ಕೇಳುತ್ತೀ. 14. ಅವನು ಕೊಡುತ್ತಾನೆ. 15. ಆಳು ಬರುತ್ತಾನೆ. 16. ಕುದುರೆ ಸಿಕ್ಕುತ್ತದೆ.

40. ಈ ವಾಕ್ಯಗಳಲ್ಲಿ ಅರ್ಥವ್ಯತ್ಯಾಸವೇನು?

| | |
|---|---|
| ನಾನೂ ಬರುವೆನು. | ನಾನೂ ಬಂದೇನು. |
| ಒಂದು ದಿನಕ್ಕೆ ಕಲಿಯುವಿರಿ. | ಒಂದು ದಿನಕ್ಕೆ ಕಲಿತೀರಿ. |
| ಅವನು ನಾಳೆ ಬರುವನು. | ಅವನು ನಾಳೆ ಬಂದಾನು. |

ಕೆಲಸ ನಡೆಯುವುದರಲ್ಲಿ ಸ್ವಲ್ಪ ಸಂಶಯವನ್ನು ಹೇಳುವ ಕ್ರಿಯಾರೂಪಕ್ಕೆ **ಸಂಭಾವನಾರೂಪವೆಂದು** ಹೆಸರು.

ಈ ರೂಪದಲ್ಲಿ ಪುರುಷದ ಗುರುತುಗಳ ಮೊದಲನೆಯ ಅಕ್ಷರವು[3] ದೀರ್ಘವಾಗಿಯೇ ಇರುತ್ತದೆ.

---

[3] ದೀರ್ಘವೆಂದರೆ ಎಳೆದು ಉಚ್ಚರಿಸುವ ಅಕ್ಷರವೆಂದು ತಿಳಿಸಬೇಕು. ವಿಧ್ಯಾದಿ, ನಿಷೇಧ, ಸಂಭಾವನೆ—ಇವುಗಳಿಗೆ ಅರ್ಥವೆಂದು ಸಂಜ್ಞೆ.

## ಅಭ್ಯಾಸ 47

೪೬ ನೆಯ ಅಭ್ಯಾಸದಲ್ಲಿರುವ ಕ್ರಿಯಾಪದಗಳ ಸಂಭಾವನಾರೂಪವನ್ನು ಹೇಳಿ.

## ಅಭ್ಯಾಸ 48

ಈ ಕೆಳಗಣ ವಾಕ್ಯಗಳಲ್ಲಿರುವ ಕ್ರಿಯಾಪದಗಳ ಕಾಲ, [3]ಅರ್ಥ, ಲಿಂಗ, ಪುರುಷ, ವಚನ – ಇವುಗಳನ್ನು ತಿಳಿಸಿ: 1. ಅವನು ಕೆಡುವನು. 2. ದಯವಿರಲಿ. 3. ಗಾಡಿ ನಾಳೆ ಬಂದೀತು. 4. ಇನ್ನು ಓದೋಣ. 5. ಅವರು ಆಟವನ್ನು ನೋಡಿದರು. 6. ಹಣವನ್ನು ಕೊಡು. 7. ಅವನು ಆಳನ್ನು ಕಳುಹಿಸನು. 8. ಅಂಗಡಿಗೆ ಹೋಗೋಣ. 9. ಹಾಗೆ ಯಾರು ಹೇಳುತ್ತಾರೆ? 10. ಮೆಲ್ಲಗೆ ನಡೆ. 11. ಇದನ್ನು ಕೇಳಿ. 12. ಸ್ವಾಮಿಗಳು ಡೇರಾಡೂನಿನಲ್ಲಿ ಮಠವನ್ನು ಸ್ಥಾಪಿಸಿದರು.

# ಅಧ್ಯಾಯ 5

41. ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ನಾಮಪದಗಳಿಗೆ ಸೇರಿಕೊಂಡಿರುವ ನಾಮ ಪದಗಳು ಯಾವುವು?

ಧೀರರಾದ ಜನರು ಗೆಲ್ಲುತ್ತಾರೆ.

ವಿಂಧ್ಯೆ ಎಂಬ ಪರ್ವತವು ಇಂಡಿಯದ ಮಧ್ಯದಲ್ಲಿದೆ.

ಹಕ್ಕಿಗಳು ರೆಕ್ಕೆಯುಳ್ಳ ಪ್ರಾಣಿಗಳು.

ಹಿರಿಯವರಾದ ಜನರು ಕಿರಿಯವರಾದ ಜನರಿಗೆ ಬುದ್ಧಿ ಹೇಳಿದರು.

ಏಳು ಪುಸ್ತಕಗಳು ಬೇಕು.

ಅಂಥಾ ಪುಸ್ತಕವೆಲ್ಲಿದೆ?

ಕೆಲವು ನಾಮಪದಗಳು ಬೇರೆ ನಾಮಪದಗಳಿಗೆ ಸೇರಿಕೊಂಡು ಎಂಥ (ದು)? ಯಾವ (ದು)? ಎಷ್ಟು ಎಂಬ ಪ್ರಶ್ನೆಗೆ ಉತ್ತರವಾಗಿರುವುವು. ಇವಕ್ಕೆ ವಿಶೇಷಣ ಗಳೆಂದು ಹೆಸರು. ಇವು ಯಾವ ನಾಮಪದಕ್ಕೆ ಸೇರಿಕೊಂಡಿರುವುವೋ ಅವಕ್ಕೆ ವಿಶೇಷ್ಯವೆಂದು ಹೆಸರು.

ವಿಶೇಷಣಗಳಿಗೆ 'ಅ', 'ಆದ', 'ಎಂಬ', 'ಉಳ್ಳ'–ಎಂಬ ಗುರುತುಗಳು ಬರುವುದುಂಟು. ಷಷ್ಠೀವಿಭಕ್ತಿಯು ಯಾವಾಗಲೂ ವಿಶೇಷಣವಾಗಿಯೇ ಇರುವುದು.

## ಅಭ್ಯಾಸ 49

ಈ ವಾಕ್ಯಗಳಲ್ಲಿರುವ ನಾಮಪದಗಳು ವಿಶೇಷಣಗಳೋ? ವಿಶೇಷ್ಯಗಳೋ? ಏಕೆ?

1. ನನ್ನಲ್ಲಿ ಹರಿತವಾದ ಕತ್ತರಿ ಇದೆ. 2. ಅವನಲ್ಲಿ ಹತ್ತು ಬಲವಾದ ಎತ್ತುಗಳಿವೆ. 3. ಈ ಚಿಕ್ಕವನಾದ ಹುಡುಗನು ಹೆದರುತ್ತಾನೆ. 4. ನಮ್ಮ ಮನೆ ಬಿತ್ತು. 5. ಆ ದೊಡ್ಡ ದಾದ ಬಲೆಗೆ ಎರಡೇ ಮೊಲಗಳು ಬಿದ್ದುವು. 6. ಇದಕ್ಕೆ ಹತ್ತರಷ್ಟು ತುಪ್ಪಬೇಕು. 7. ಇಂಥ ನುಣ್ಣನೆಯ ಗಾರೆಯನ್ನು ಏನು ಮಾಡೋಣ? 8. ಬಡತನದಲ್ಲಿ ನಿಜವಾದ ಸ್ನೇಹಿತರು ಉಳಿ ಯುವರು. 9. ಅಮರಾವತಿಯೆಂಬ ಪಟ್ಟಣದಲ್ಲಿ ಅಮರಶೇಖರನೆಂಬ ರಾಜನು ಇದ್ದನು. 10. ಕಾಶಿಯಲ್ಲಿ ವಿದ್ಯಾಭೂಷಣನೆಂಬ ಸಕಲಶಾಸ್ತ್ರವನ್ನು ಬಲ್ಲವನಾದ ಒಬ್ಬ ಬ್ರಾಹ್ಮಣನು ಇದ್ದನು. 11. ಹುಡುಗರ ಟೋಪಿಗಳು ನಿಮ್ಮ ಅಂಗಡಿಯಲ್ಲಿ ಸಿಕ್ಕುತ್ತವೆಯೆ? 12. ಖಂಡ ಗಳಲ್ಲಿ ದೊಡ್ಡದಾದ ಏಷಿಯಾದಲ್ಲಿ ಎಲ್ಲಾ ವಿಧವಾದ ದೇಶಗಳೂ ಇವೆ. 13. ಇದರಿಂದ ಜನರಿಗೆ ಹೆಚ್ಚಾದ ಪ್ರಯೋಜನ ಉಂಟು. 14. ತುಸು ಕಪ್ಪನೆಯ ಬಟ್ಟೆಗಳನ್ನು ತೋರಿಸು. 15. ಒಂಟೆಯು ಹೆಚ್ಚಾದ ಭಾರವನ್ನು ಹೊರುತ್ತದೆ. 16. ತೀರ ಕೊನೆಯ ಪುಟದಲ್ಲಿ ಏನು ಇದೆ? 17. ಅಷ್ಟು ನೆಟ್ಟನೆಯ ಕೋಲು ಏತಕ್ಕೆ ಬೇಕು? 18. ಈ ರೈಲುಗಾಡಿ ಮದರಾಸಿನಿಂದ ಬೆಂಗಳೂರಿಗೆ ಹೋಗುತ್ತದೆ. 19. ಹೊನ್ನವಳ್ಳಿಯಲ್ಲಿ ರುಚಿಯಾದ ಎಳನೀರುಗಳು ಸಿಕ್ಕುತ್ತವೆ. 20. ತಿಪಟೂರಿನಲ್ಲಿ ವಾರಕ್ಕೆ ಎರಡು ಸಂತೆಗಳು ಆಗುತ್ತವೆ.

42. ಮುಂದೆ ಕೊಟ್ಟಿರುವ ವಾಕ್ಯಗಳಲ್ಲಿ ವಿಶೇಷಣಗಳು ಯಾವುವು? ಅವು ವಿಶೇಷ್ಯಕ್ಕೆ ಯಾವ ಕಡೆಗೆ ಇವೆ?

ಗೆಳೆಯರಿಬ್ಬರೂ ಇಲ್ಲಿ ಆಡುತ್ತಾರೆ.
ನಿಮ್ಮ ಹುಡುಗಿ ಇನ್ನೂ ಚಿಕ್ಕದಾಗಿದೆ.
ಈ ಹೂವು ಕೆಂಪು.
ಎತ್ತು ಒಂದಕ್ಕೆ ಎಪ್ಪತ್ತು ರೂಪಾಯಿ ಆಗುತ್ತದೆ.

ವಿಶೇಷ್ಯಕ್ಕೆ ಮುಂದುಗಡೆ ಇರುವ ವಿಶೇಷಣಗಳಿಗೆ **ಉತ್ತರವಿಶೇಷಣ** ಗಳೆಂದು ಹೆಸರು.

## ಅಭ್ಯಾಸ 50

ಈ ವಾಕ್ಯಗಳಲ್ಲಿ ವಿಶೇಷಣಗಳನ್ನು ಕಂಡುಹಿಡಿದು ಉತ್ತರವಿಶೇಷಣಗಳು ಯಾವುವೆಂಬುದನ್ನು ತಿಳಿಸಿ:

1. ಮುದುಕನಾದ ನನ್ನ ಸ್ವಾಮಿ ಬದುಕಿದಾನೆಯೆ? 2. ಇಂಥ ಮೂರ್ಖರಾದ ಸ್ತ್ರೀಯರು ಎಲ್ಲಿಯೂ ಇಲ್ಲ. 3. ನನ್ನ ಮಾತು ಸುಳ್ಳಲ್ಲ. 4. ಮುತ್ತು ಜೋಳಕ್ಕೆ ಕಡಿಮೆಯಲ್ಲ. 5. ನಿಜಕ್ಕೆ ಬೆಲೆ ಹೆಚ್ಚು. 6. ನೀವು ಎಲ್ಲರೂ ಕೈಕಾಲು ತೊಳೆದುಕೊಳ್ಳಿ. 7. ದುಡ್ಡುಳ್ಳ ಜನರೇ ದೊಡ್ಡವರು. 8. ತರಗತಿಯಲ್ಲಿ ರಾಮನು ಮೂರನೆಯವನು. 9. ಕಸ್ತೂರಿಯು

ಸಾಸಿವೆಯಷ್ಟು ಇತ್ತು. 10. ಅದರ ವಾಸನೆ ಬಲವಾಗಿತ್ತು. 11. ಮೂರ್ತಿ ಸಣ್ಣದು; ಕೀರ್ತಿ ದೊಡ್ಡದು. 12. ಹಿರಿಯಕ್ಕನ ಚಾಳಿ ಮನೆಗೆಲ್ಲ.

**43.** ಈ ಮುಂದಣ ವಾಕ್ಯಗಳಲ್ಲಿರುವ ಉತ್ತರ ವಿಶೇಷಣಗಳಲ್ಲಿ ಕ್ರಿಯಾಪದದ ಅರ್ಥವನ್ನು ಪೂರ್ತಿಮಾಡುವುವು ಯಾವುವು? ಕ್ರಿಯಾಪದಗಳನ್ನು ಬಿಟ್ಟಿದ್ದರೆ ಅವುಗಳನ್ನು ಊಹಿಸಿ ಬರೆಯಿರಿ.

| | |
|---|---|
| ಈ ಗಿಣಿ ಎಷ್ಟು ಮುದ್ದಾಗಿದೆ! | ಗಿಣಿಯೇ ಚೆನ್ನ. |
| ನನ್ನ ಮುಖವು ದೊಡ್ಡದಲ್ಲ. | ಅವನು ಹೆಡ್ಡನಾದನು. |
| ನೀನು ಹುಚ್ಚ. | ಇದಕ್ಕೆ ಅದು ಸಮವೆ? |

ಕ್ರಿಯಾರ್ಥವನ್ನು ಪೂರ್ಣಮಾಡುವ ಉತ್ತರವಿಶೇಷಣಗಳಿಗೆ **ವಿಧೇಯ ವಿಶೇಷಣಗಳೆಂದು** ಹೆಸರು.

ಇವುಗಳ ಮುಂದೆ ಕ್ರಿಯಾಪದಗಳನ್ನು ಬಿಟ್ಟುಬಿಡುವ ವಾಡಿಕೆಯುಂಟು.

## ಅಭ್ಯಾಸ 51

ಇಲ್ಲಿರುವ ವಿಶೇಷಣಗಳನ್ನು ಹೇಳಿ ಅವುಗಳಲ್ಲಿ ವಿಧೇಯವಿಶೇಷಣಗಳನ್ನು ಗುರುತುಮಾಡಿ:

1. ಯಾವುದು ಒಳ್ಳೆಯದು? 2. ಯಮುನಾನದಿಯ ದಡದಲ್ಲಿ ಎಷ್ಟೋ ಜನರು ಸಂಚರಿಸುತ್ತಿರುವರು. 3. ತರುಣನಾದ ರಜಪೂತನು ಅಲ್ಲಿಂದ ಎದ್ದನು. 4. ವೀರನಾದ ನಿನ್ನ ಶೌರ್ಯಕ್ಕೆ ಮೆಚ್ಚಿದೆನು. 5. ಈ ಕೆಲಸವು ಮೊದಲನೆಯದು. 6. ನಾನು ಅದ್ಭುತವಾದ ಸ್ವಯಂವರವನ್ನು ನೋಡಿದೆನು. 7. ಭೀಮಸೇನನು ಸಹಾಯನಾಗಿದ್ದನು. 8. ಅರ್ಜುನನು ಬಿಲ್ಲಾಳಾಗಿದ್ದನು. 9. ಇವನು ಮೂರ್ಖನು. 10. ನಿನ್ನ ಮಾತು ಸರಿ. 11. ಕೆಲವರು ಹಾಗೆ ಹೇಳುತ್ತಾರೆ. 12. ನಿಮ್ಮೆಲ್ಲರ ಮಾತೂ ಒಂದೇ.

**44.** ಈ ವಾಕ್ಯಗಳಲ್ಲಿ ಕ್ರಿಯಾಪದಗಳಿಗೆ ಸೇರಿಕೊಂಡಿರುವ ಅವ್ಯಯಗಳು ಯಾವುವು? ಅವು ಏನನ್ನು ಹೇಳುತ್ತವೆ?

ಹುಡುಗನು ಚೆನ್ನಾಗಿ ಓದುತ್ತಾನೆ.
ಯಜಮಾನರು ಒಳಗೆ ಇದ್ದಾರೆ.
ಯಾವಾಗಲೂ ಆಡುತ್ತೀಯೆ.

ಕ್ರಿಯಾಪದಗಳಿಗೆ ಸೇರಿಕೊಂಡು 'ಹೇಗೆ?' 'ಎಲ್ಲಿ?' 'ಯಾವಾಗ?' ಎಂಬುದನ್ನು ಹೇಳುವ ಅವ್ಯಯಗಳಿಗೆ **ಕ್ರಿಯಾವಿಶೇಷಣಗಳೆಂದು** ಹೆಸರು.

## ಅಭ್ಯಾಸ 52

ಇಲ್ಲಿರುವ ಕ್ರಿಯಾವಿಶೇಷಣಾವ್ಯಯಗಳನ್ನು ಗೊತ್ತುಮಾಡಿ.

1. ಮಗು ಗಟ್ಟಿಯಾಗಿ ಅತ್ತಿತು. 2. ಮುಂದೆ ಹೋಗು. 3. ಈಗ ಬಂದೆ. 4. ಹೀಗೆ ಮಾಡುತ್ತಾರೆಯೆ? 5. ಆತನು ಸೊಗಸಾಗಿ ಹಾಡುತ್ತಾನೆ. 6. ಎಲ್ಲೆಲ್ಲಿಯೂ ಮಳೆ ಬಂತು. 7. ಸುಮ್ಮಸುಮ್ಮನೆ ಬಯ್ಯುತ್ತಾರೆ. 8. ಆ ವೀರನು ಅಲ್ಲಿಯೇ ಹುಟ್ಟಿದನು. 9. ನಾರದರು ದೇವರ ಅಪ್ಪಣೆಯಿಂದ ಮೊದಲು ಇಲ್ಲಿ ಬಂದರು. 10. ಇನ್ನು ಹೊರಡಿರಿ. 11. ಸುತ್ತಮುತ್ತ ಕಳ್ಳರು ಇದ್ದಾರೆ. 12. ಈಚೆಗೆ ಬಹುಜನ ಇಂಗ್ಲೀಷು ಕಲಿಯುತ್ತಾರೆ.

45. ಈ ಕೆಳಗಣ ವಿಶೇಷಣಗಳಿಗೆ ವಿಶೇಷ್ಯಗಳು ಯಾವುವು? ಇವು ಯಾವ ಪದ?

ಚೆಂಡು ಗಟ್ಟಿಯಾಗಿ ಇದೆ.

ರಾಮನು ಚೆಂಡನ್ನು ಗಟ್ಟಿಯಾಗಿ ಹೊಡೆದನು.

ತುಸು ಹಾಲು ಕೊಡು.

ರಾಗಿ ಪೈರು ತುಸು ಕೆಟ್ಟಿತು.

ಕೆಲವು ಕ್ರಿಯಾವಿಶೇಷಣಗಳೂ ನಾಮವಿಶೇಷಣಗಳೂ ಒಂದೇ ರೂಪದಲ್ಲಿರುತ್ತವೆ. ಅವುಗಳ ವಿಶೇಷ್ಯದಿಂದ ಎಂಥ ವಿಶೇಷಣವೆಂಬುದನ್ನು ಗೊತ್ತು ಮಾಡಬೇಕು.

## ಅಭ್ಯಾಸ 53

ಇಲ್ಲಿರುವ ನಾಮವಿಶೇಷಣಗಳನ್ನೂ ಕ್ರಿಯಾವಿಶೇಷಣಗಳನ್ನೂ ಕಂಡುಹಿಡಿಯಿರಿ:

1. ಚಿನುಕುರುಳಿ ಕಮ್ಮಗೆ ಇದೆ. 2. ಅವನು ಮೆಲ್ಲಗೆ ಹೆಜ್ಜೆ ಇಡುತ್ತಾನೆ. 3. ರಂಗಯ್ಯ, ಇಷ್ಟು ಬೆಣ್ಣೆ ಕೊಡುತ್ತೇನೆ, ಬಾ. 4. ಇಷ್ಟು ಅಳುತ್ತೀಯೆ. 5. ನಿನಗೆ ಎಷ್ಟು ಲಾಭವಾಯಿತು? 6. ನಿನ್ನ ಮಾತು ಹೆಚ್ಚಾಯಿತು. 7. ಭೂಮಿ ಗುಂಡಾಗಿದೆ. 8. ಕಾಗದ ಕೆಂಪಗೆ ಇದೆ. 9. ಕುಳಗಳನ್ನು ಕೆಂಪಗೆ ಕಾಸಿರಿ. 10. ಸೀರೆಯು ಕಪ್ಪಗೆ ಇತ್ತು; ಬೆಳ್ಳಗಾಯಿತು. 11. ಆ ದಪ್ಪನೆಯ ಆಳು ದೊಪ್ಪನೆ ಬಿದ್ದನು. 12. ಹಾವು ಸರಸರನೆ ಹರಿದು ಹೋಯಿತು. 13. ಈ ಭಾವಿಯು ಆಳವಾಗಿರುತ್ತದೆ. 14. ಈ ಮಾವಿನ ಹಣ್ಣು ಸಕ್ಕರೆಯಷ್ಟು ಸವಿಯಾಗಿರುತ್ತದೆ. 15. ಇದು ಬಲು ಸಣ್ಣದು. 16. ನಿಮ್ಮ ಹುಡುಗನು ಚೆನ್ನಾಗಿ ಬರೆಯುತ್ತಾನೆ.

46. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ವಿಶೇಷಣಗಳನ್ನು ನೋಡಿ:

ಒಂದುನೂರು ತೆಂಗಿನಕಾಯಿ ಬೇಕು.

ಅವನು ತೀರ ಸಣ್ಣದಾದ ಕೋಲನ್ನು ತಂದನು.

ಎಷ್ಟು ಮೆಲ್ಲಗೆ ನಡೆಯುತ್ತಾನೆ!

ರಾಮನು ಬಲು ಸಿಟ್ಟಾಗಿ ಇರುತ್ತಾನೆ.

ಇನ್ನೂ ಸ್ವಲ್ಪ ಹೆಚ್ಚು ನೀರು ಹಾಕು.

*['ತೆಂಗಿನಕಾಯಿ' ಎಂಬುದಕ್ಕೆ ವಿಶೇಷಣವಿದೆಯೇ? 'ಒಂದು' ಎಂಬುದು ಯಾವುದಕ್ಕೆ ಸೇರಿದೆ? 'ಕೋಲನ್ನು' ಇದಕ್ಕೆ ವಿಶೇಷಣವು ಯಾವುದು? 'ತೀರ' ಎಂಬುದು ಯಾವುದಕ್ಕೆ ವಿಶೇಷಣ? 'ಮೆಲ್ಲಗೆ' ಎಂಬುದು ಎಂಥ ವಿಶೇಷಣ? 'ಎಷ್ಟು' ಎಂಬುದು ಯಾವುದಕ್ಕೆ ವಿಶೇಷಣ? 'ಹೆಚ್ಚು" ಎಂಬುದು ಯಾವುದಕ್ಕೆ ವಿಶೇಷಣ? ಸ್ವಲ್ಪ ಎಂಬುದೋ? 'ಇನ್ನೂ' ಎಂಬುದೋ?]*

ಅವ್ಯಯವಾಗಲಿ ನಾಮಪದವಾಗಲಿ ವಿಶೇಷಣಕ್ಕೆ ವಿಶೇಷಣವಾಗಿರಬಹುದು. ಬಹುಮಟ್ಟಿಗೆ ವಿಶೇಷಣವಿಶೇಷಣಗಳು "ಎಷ್ಟು?" ಎಂಬುದನ್ನು ಹೇಳುತ್ತವೆ.

### ಅಭ್ಯಾಸ 54

ಸಾಮಾನ್ಯ ವಿಶೇಷಣಗಳನ್ನೂ ವಿಶೇಷಣವಿಶೇಷಣಗಳನ್ನೂ ತಿಳಿಸಿ, ಅವು ಯಾವ ಪದವೆಂಬುದನ್ನೂ ಹೇಳಿ.

**1.** ನನಗೆ ಇಷ್ಟಾದರೂ ಸದ್ದು ಕೇಳಿಸಲಿಲ್ಲ. **2.** ಅವನು ಅಷ್ಟಿಷ್ಟು ಸೋಮಾರಿಯಲ್ಲ. **3.** ರಾಮನು ನೆಟ್ಟಗೆ ತನ್ನ ಕೈಯ್ಯನ್ನು ನೀಡಿದನು. **4.** ಅವನಿಗೆ ಇನ್ನು ಎಷ್ಟುಬೇಕು? **5.** ರೋಗಿಗೆ ಎಷ್ಟು ಸಲ ಭೇದಿ ಆಯಿತು? **6.** ನೀನು ಬಲುಬೇಗನೆ ನಡೆಯುತ್ತೀಯೆ. **7.** ಅದೆಲ್ಲ ನಿಜ. **8.** ಈ ಮಾತು ಮುಕ್ಕಾಲುವಾಸಿ ಸುಳ್ಳು. **9.** ಹೊಗೆಯು ಮನೆಯಲ್ಲಿ ಎಲ್ಲೆಲ್ಲಿಯೂ ತುಂಬಿತು. **10.** ತುಸು ಹಿಂದೆ ನೋಡು. **11.** ಹಿಂದಕ್ಕೆ ತುಸು ನೋಡು. **12.** ನಿನ್ನ ಅಕ್ಷರ ಎಷ್ಟು ಸೊಟ್ಟಗಿದೆ! **13.** ಸೀತೆಯ ಅಕ್ಷರ ಮತ್ತೂ ಸೊಟ್ಟಗೆ. **14.** ಮತ್ತೆಂಥ ಪುಸ್ತಕ ಬೇಕು? **15.** ಈಗ ಬಟ್ಟೆ ಬಹಳ ತುಟ್ಟಿ. **16.** ಮತ್ತಷ್ಟು ಸಕ್ಕರೆ ಹಾಕು.

# ಅಧ್ಯಾಯ 6

**47.** ಇಲ್ಲಿರುವ ನಾಮಪದಗಳು ಯಾವ ಮಾತಿಗೆ ಸೇರಿಕೊಂಡಿವೆ?

ಮನೆಗಳಲ್ಲಿ ಬೆಕ್ಕು ಇಲಿಗಳನ್ನು ಹಂಚಿಕೆಯಿಂದ ಹಿಡಿಯುತ್ತದೆ.
ರೈತನು ಕುಂಬಳಕಾಯಿಯನ್ನು ಜೋಯಿಸನಿಗೆ ಕೊಟ್ಟನು.

(ಯಾವುದು ಹಿಡಿಯುತ್ತದೆ? ಎಲ್ಲಿ ಹಿಡಿಯುತ್ತದೆ? ಏನನ್ನು ಹಿಡಿಯುತ್ತದೆ? ಹೇಗೆ ಹಿಡಿಯುತ್ತದೆ? ಯಾವನು ಕೊಟ್ಟನು? ಏನನ್ನು ಕೊಟ್ಟನು? ಯಾರಿಗೆ ಕೊಟ್ಟನು?)

ನಾಮಪದಗಳು ಸಾಮಾನ್ಯವಾಗಿ ಕ್ರಿಯಾಪದಕ್ಕೆ ಸೇರಿಕೊಂಡಿರುತ್ತವೆ.

**48.** ಈ ವಾಕ್ಯಗಳಲ್ಲಿ ನಾಮಪದಗಳು ಯಾವ ಮಾತಿಗೆ ಹೊಂದಿಕೊಂಡಿವೆ?

ನಮ್ಮ ಮನೆಯಲ್ಲಿ ಒಂದು ಕರಿಯದಾದ ಬೆಕ್ಕು ಇಲಿಗಳನ್ನೆಲ್ಲ ಬಗೆಬಗೆಯಾದ ಹಂಚಿಕೆಯಿಂದ ಹಿಡಿಯುತ್ತದೆ.

ಇಲಿಯ ಬೋನು ಚಿಕ್ಕದು.  ಅವನು ನಿನ್ನ ತಮ್ಮ.

ವಿಶೇಷಣವಾಗಿರುವ ನಾಮಪದಗಳು ತಮ್ಮ ವಿಶೇಷ್ಯವಾದ ನಾಮಪದಕ್ಕೆ ಸೇರಿಕೊಂಡಿರುತ್ತವೆ.

49. ಮುಂದೆ ಕೊಟ್ಟಿರುವ ವಾಕ್ಯಗಳಲ್ಲಿ ದಪ್ಪಕ್ಷರದ ನಾಮಪದಗಳು ಯಾವ ಮಾತುಗಳಿಗೆ ಸೇರಿಕೊಂಡಿವೆ?

**ಅವನು ಮಾತಿನಲ್ಲಿ ಜಾಣ. ದುಡ್ಡಿನಿಂದ ದೊಡ್ಡಸ್ತಿಕೆ.**

**ಇದು ನನಗೆ ಇಷ್ಟ. ರೂಪಾಯಿಗೆ ಎರಡು ಸೇರು ಕೊಡುತ್ತಾರೆ.**

ಕೆಲವು ನಾಮಪದಗಳು ವಿಶೇಷಣವಲ್ಲದೆ ಇದ್ದರೂ ಬೇರೆಯ ನಾಮಪದಗಳಿಗೆ ಸೇರಿಕೊಂಡಿರುತ್ತವೆ.

50. ಈ ಕೆಳಗಣ ವಾಕ್ಯಗಳಲ್ಲಿ ದಪ್ಪಕ್ಷರದ ನಾಮಪದಗಳು ಯಾವ ಮಾತುಗಳಿಗೆ ಸೇರಿವೆ?

**ಹಕ್ಕಿ ಮನೆಯ ಮೇಲೆ ಹಾರಿತು.**

**ಇವು ಎರಡಕ್ಕೂ ನಡುವೆ ಒಂದು ಮಠವಿದೆ.**

**ಮನೆಯಿಂದ ಈಚೆಗೆ ಬಾ. ನಿನಗಿಂತ ಅವನು ದೊಡ್ಡವನು.**

ಕೆಲವು ನಾಮಪದಗಳು ಅವ್ಯಯಗಳಿಗೆ ಸೇರಿಕೊಂಡಿರುತ್ತವೆ.  ಆಗ ನಾಮಪದವೂ ಅವ್ಯಯವೂ ಸೇರಿ ಒಟ್ಟಿಗೆ ಅರ್ಥ ಮಾಡಬೇಕಾಗಿರುತ್ತದೆ.

## ಅಭ್ಯಾಸ 55

ಈ ವಾಕ್ಯಗಳಲ್ಲಿ ನಾಮಪದಗಳ ಅನ್ವಯವನ್ನು (ಎಂದರೆ ಇವು ಯಾವ ಪದಗಳೊಡನೆ ಸೇರಿಕೊಂಡು ಅರ್ಥವಾಗುತ್ತವೆ ಎಂಬುದನ್ನು) ತಿಳಿಸಿ:

1. ಪುಟ್ಟಿಗಳು ಬೆಂಚಿನಮೇಲೆ ಇವೆ. 2. ಇಲ್ಲಿ ಇನ್ನೂ ಎತ್ತರವಾದ ಮರಗಳಿವೆ. 3. ತೆಂಗಿನಗಿಡಕ್ಕೆ ಸೋಗೆಗಳು ಇರುತ್ತವೆ. 4. ಅದರ ತುಂಬ ನೀರು ಇದೆ. 5. ಇದು ತುರಚಿಯ ಗಿಡ. 6. ಮನೆಯ ಹಿಂದೆ ತಿಪ್ಪೆ ಹಾಕಿದಾರೆ. 7. ಅವನ ಮಕ್ಕಳಲ್ಲಿ ಇವನು ಬುದ್ಧಿವಂತ. 8. ಹಂಡೆಯ ಒಳಕ್ಕೆ ನೀರು ಸುರಿ. 9. ಕುದುರೆಗಳಲ್ಲಿ ಅನೇಕ ಜಾತಿಗಳುಂಟು. 10. ಅರಬಿಯವರು ಮನೆಯಲ್ಲಿ ವಾಸಮಾಡುತ್ತಿರಲಿಲ್ಲ. 11. ಈ ದೇಶದಲ್ಲಿ ಅನೇಕರು ಕುದುರೆಗಳನ್ನು ಚೆನ್ನಾಗಿ ಸಾಕುವುದಿಲ್ಲ. 12. ಎಲೆಗಳು ದುಂಡಗೆ ಇರುತ್ತವೆ. 13. ಮೂರುತಿಂಗಳಿಗೆ ಮುಂಚೆ ಈ ಹೊಂಡದಲ್ಲಿ ತುಂಬ ನೀರು ಇತ್ತು. 14. ನಿಂಬೆ ಹುಳಿಯಾಗಿರುತ್ತದೆ. 15. ಆ ಮುದುಕನಿಗೆ ಎಪ್ಪತ್ತು ವರ್ಷವಾಯಿತು. 16. ನಿನಗೆ ಕೇಡಿಗೆ ದುರ್ಬುದ್ಧಿ ಬಂತು.

51. ಈ ಕೆಳಗೆ ಇರುವ ವಾಕ್ಯಗಳಲ್ಲಿ ಅವ್ಯಯಗಳು ಯಾವ ಮಾತಿನಲ್ಲಿ ಅನ್ವಯಿಸುತ್ತವೆ?

ಕೆಳಗೆ ಮಲಗುತ್ತಾನೆ. ನೀನು ಮತ್ತೆ ಬಂದೆಯಾ?

ಹುಡುಗನು ಕಾಗದವನ್ನು ಚರ್ರನೆ ಹರಿದನು.

ಅವ್ಯಯಗಳು ಸಾಮಾನ್ಯವಾಗಿ ಕ್ರಿಯಾಪದದಲ್ಲಿ ಅನ್ವಯಿಸುತ್ತವೆ.

52. ಕೆಳಗಣ ವಾಕ್ಯಗಳಲ್ಲಿ ದಪ್ಪಕ್ಷರದ ಅವ್ಯಯಗಳು ಏತರಲ್ಲಿ ಅನ್ವಯಿಸುತ್ತವೆ?

**ಹೇಗೋ** ಹಾಗೆ ಕೆಲಸ ಮಾಡುತ್ತಾನೆ.

**ಅಷ್ಟು** ಬೇಗನೆ ಮುಗಿಯುತ್ತದೆಯೆ?

**ಇನ್ನು** ಮೇಲೆ ಏನು ಮಾಡುತ್ತೀಯೆ?

ಕೆಲವು ಅವ್ಯಯಗಳು ಬೇರೆ ಅವ್ಯಯಗಳಲ್ಲಿ ಅನ್ವಯಿಸುತ್ತವೆ.

ಈ ಅನ್ವಯವು "ಎಷ್ಟು?" ಎಂಬುದನ್ನು ಹೇಳುವ ಅವ್ಯಯಗಳಿಗೆ ಬರುತ್ತದೆ.

53. ಇಲ್ಲಿ ಅವ್ಯಯಗಳ ಅನ್ವಯವೇನು?

ಅಂಥವರು ಇನ್ನು ಯಾರು ಇದ್ದಾರೆ?

ಮತ್ತೆ ಮೂವರು ಊಟಮಾಡಿದರು.

ಆ ಹುಡುಗ ತುಸು ಕೆಂಪು.

ಕೆಲವು ಅವ್ಯಯಗಳು ನಾಮವಿಶೇಷಣವಾಗಿ ಉಪಯೋಗವಾಗುತ್ತವೆ.

## ಅಭ್ಯಾಸ 56

ಇಲ್ಲಿರುವ ಅವ್ಯಯಗಳನ್ನೂ ಅವುಗಳ ಅನ್ವಯವನ್ನೂ ತಿಳಿಸಿ:

1. ಯಾವಾಗಲೂ ನಿಜ ಹೇಳಿ. 2. ನಮ್ಮ ಊರಿಗೆ ಅದು ಬಲು ದೂರ. 3. ಇನ್ನು ನೆಟ್ಟಗೆ ಹೊರಡೋಣ. 4. ನೀರಿನೊಳಗೆ ಕಸ ಇದೆ. 5. ಇಲ್ಲಿಯವರೆಗೆ ಏನು ಮಾಡಿದೆ? 6. ಒಬ್ಬ ಹುಡುಗನು ಹತ್ತಿರಕ್ಕೆ ಬಂದನು. 7. ತರುವಾಯ ಆನೆಯೂ ಸಿಂಹವೂ ಸೇರಿದುವು. 8. ಗಿಡಗಳಿಗೆ ಬೇರೆಬೇರೆ ಮೂರು ಸ್ಥಳದಲ್ಲಿ ಆಹಾರವು ದೊರೆಯುತ್ತದೆ. 9. ಸಾರಾಯಿಯು ಇನ್ನೊಂದು ಬಗೆಯ ಮಾದಕ. 10. ನಡುವೆ ಒಂದು ಕಡ್ಡಿಯನ್ನು ನೇರವಾಗಿ ನೆಡಬೇಕು. 11. ಮರವು ಹೇಗೆ ಬರುವುದು? 12. ದೊಡ್ಡವರ ಮುಂದೆ ಎಂಥ ಮಾತನಾಡಿದೆ! 13. ಊರ ಹೊರಗೆ ಹೊಲಗೇರಿ ಇದೆ. 14. ನೀರಿಗೋಸ್ಕರ ಎಷ್ಟು ಅಳುತ್ತೀ! 15. ಭೂಮಿಯು ತೀರ ಗುಂಡಗಿಲ್ಲ. 16. ಗಾರೆಯನ್ನು ನುಣ್ಣಗೆ ಅರೆಯಿರಿ.

54. ಈ ಕೆಳಗಣ ವಾಕ್ಯಗಳಲ್ಲಿ ಮಾತುಗಳನ್ನು ಸೇರಿಸುವ ಅವ್ಯಯಗಳು ಯಾವುವು? ವಾಕ್ಯಗಳನ್ನು ಸೇರಿಸುವ ಅವ್ಯಯಗಳು ಯಾವುವು? ಅನ್ವಯವಿಲ್ಲದ ಅವ್ಯಯಗಳು ಯಾವುವು?

ರಾಮನಾಗಲಿ, ಕೃಷ್ಣನಾಗಲಿ ಬರುತ್ತಾರೆ.

ಕತ್ತೆ ಮತ್ತು ನಾಯಿ—ಇವುಗಳ ಕಥೆಯನ್ನು ಹೇಳು.

ನೀನು ಮಾತನಾಡುತ್ತೀಯೆ; ಆದರೆ ಕೆಲಸ ಮಾಡುವುದಿಲ್ಲ.

ಓಹೋ! ಹೀಗೋ! ನೀನೇ ತಿಂದೆಯೊ?

ಕೆಲವು ಅವ್ಯಯಗಳು ಮಾತುಗಳನ್ನಾಗಲಿ ವಾಕ್ಯಗಳನ್ನಾಗಲಿ ಕೂಡಿಸುತ್ತವೆ. ಮತ್ತೆ ಕೆಲವು ಅವ್ಯಯಗಳಿಗೆ ಅರ್ಥವಿರುವುದೇ ಹೊರತು ಅನ್ವಯವಿರುವುದಿಲ್ಲ.

### ಅಭ್ಯಾಸ 57

ಇಲ್ಲಿರುವ ಅವ್ಯಯಗಳನ್ನು ಕಂಡುಹಿಡಿದು ಅವುಗಳು ಸೇರಿಸುವ ಮಾತುಗಳನ್ನು ಹೇಳಿ ಅನ್ವಯವಿಲ್ಲದ ಅವ್ಯಯಗಳನ್ನು ತಿಳಿಸಿ:

1. ರಾಮನೂ ಲಕ್ಷ್ಮಣನೂ ಅರಣ್ಯಕ್ಕೆ ಹೋದರು. 2. ಅವನ ಮಾವನ ಮತ್ತು ಅತ್ತೆಯ ಜಗಳದಲ್ಲಿ ಅವನಿಗೆ ಊಟಕ್ಕೆ ಸೊನ್ನೆಯಾಯಿತು. 3. ಮೊದಲು ಭೀಮನೂ ತರುವಾಯ ಅರ್ಜುನನೂ ಹೊರಟರು. 4. ರಾಮನು ಅಥವಾ ಕೃಷ್ಣನು ಹೀಗೆನ್ನುತ್ತಾರೆ. 5. ಏನೇನೋ ಹೇಳುತ್ತಾರೆ. 6. ಭಲಾ! ನಾವೇ ಗೆದ್ದೆವು. 7. ಏನಯ್ಯ, ನೀನೂ ನಿಮ್ಮಪ್ಪನೂ ಕತ್ತೆಯ ಮೇಲೆ ಕೂತಿರಿ! 8. ಕುದುರೆಯು ನಿಮ್ಮದೆಯೊ? 9. ಆಹಾ! ಎಂಥ ಜಾಣ! 10. ಎಲಾ! ಏನು ಮಾಡಿದೆಯೊ?

# ಅಧ್ಯಾಯ 7

55. ನಾಮಪದದ ವಿಭಕ್ತಿಗಳ ಗುರುತುಗಳಿಗೂ ಕ್ರಿಯಾಪದಗಳ ಬೇರೆಬೇರೆ ಅರ್ಥವನ್ನು ಸೂಚಿಸುವ ಗುರುತುಗಳಿಗೂ ಪ್ರತ್ಯಯಗಳೆಂದು ಹೆಸರು. ಪದದಿಂದ ಪ್ರತ್ಯಯವನ್ನು ತೆಗೆದುಹಾಕಿದರೆ ಉಳಿಯುವುದು ಪ್ರಕೃತಿ. ಹೇಗೆಂದರೆ:

| ನಾಮಪದ. | ಪ್ರಕೃತಿ. | ಪ್ರತ್ಯಯಗಳು. |
|---|---|---|
| ಮನೆಗಳು | ಮನೆ | ಗಳು. |
| ಮನೆಗಳೇ | ಮನೆ | ಗಳು, ಏ. |
| ಮನೆಗಳನ್ನು | ಮನೆ | ಗಳು, ಅನ್ನು. |
| ಮನೆಗಳಿಂದ | ಮನೆ | ಗಳು, ಇಂದ. |
| ಮನೆಗಳಿಗೆ | ಮನೆ | ಗಳು, ಇಗೆ. |
| ಮನೆಗಳ | ಮನೆ | ಗಳ, ಅ. |
| ಮನೆಗಳಲ್ಲಿ | ಮನೆ | ಗಳು, *ಅಲ್ಲಿ. |

| ಕ್ರಿಯಾಪದ. | ಪ್ರಕೃತಿ. | ಪ್ರತ್ಯಯಗಳು. |
|---|---|---|
| ಮಾಡುತ್ತಾನೆ | ಮಾಡು | ಉತ್ತ, ಆನೆ. |
| ಮಾಡಿದನು | ಮಾಡು | (ಇ), ದ, ಅನು. |
| ಮಾಡುವನು | ಮಾಡು | ಉವ, ಅನು. |
| ಮಾಡಿರಿ | ಮಾಡು | ಇರಿ. |
| ಮಾಡಿಯೇನು | ಮಾಡು | (ಇ), ಏನು. |

*22ನೆಯ ಪುಟದ ಟಿಪ್ಪಣಿಯನ್ನು ನೋಡಿರಿ.

**56.** ಪ್ರಕೃತಿಯೂ ಪ್ರತ್ಯಯವೂ ಸೇರುವುದಕ್ಕೆ **ಸಂಧಿ** ಎಂದು ಹೆಸರು.

*[ಈ ಕೆಳಗಣ ಸಂಧಿಗಳಲ್ಲಿ ಪ್ರಕೃತಿಪ್ರತ್ಯಯಗಳು ಸೇರಿದ ಮೇಲೆ ಏನು ಹೆಚ್ಚು ಕಡಿಮೆ ತೋರುತ್ತದೆ?]*

| | |
|---|---|
| ರಾಮ + ಇಗೆ = ರಾಮನಿಗೆ. | ('ನ' ಹೊಸದಾಗಿ ಬಂತು.) |
| ಮನೆಗಳು + ಅನ್ನು = ಮನೆಗಳನ್ನು. | ('ಉ' ಹೋಯಿತು.) |
| ಮಾಡು + ದ + ಅನು = ಮಾಡಿದನು. | ('ಉ' ಹೋಗಿ 'ಇ' ಬಂತು 'ದ' ಕಾರದ 'ಅ' ಹೋಯಿತು) |

ಹೀಗೆ ಸಂಧಿಯಾಗುವಾಗ ಅಕ್ಷರಗಳು ಹೋದರೆ **ಲೋಪವೆಂ**ತಲೂ, ಅಕ್ಷರಗಳು ಹೊಸದಾಗಿ ಬಂದರೆ **ಆಗಮವೆಂ**ತಲೂ, ಕೆಲವು ಅಕ್ಷರಗಳು ಹೋಗಿ ಅವುಗಳ ಸ್ಥಳದಲ್ಲಿ ಬೇರೆ ಅಕ್ಷರಗಳು ಬಂದರೆ **ಆದೇಶವೆಂ**ತಲೂ ಕರೆಯುತ್ತಾರೆ.

## ಅಭ್ಯಾಸ 58

ಈ ಕೆಳಗಣ ಸಂಧಿಗಳನ್ನು ಮಾಡಿ ಲೋಪ, ಆಗಮ, ಆದೇಶ—ಇವುಗಳನ್ನು ತೋರಿಸಿ:

| | |
|---|---|
| 1. ಮರಿ + ಇಂದ. | 2. ಕೊಡು + ಉತ್ತ + ಏನೆ. |
| 3. ಗಿಡ + ಗಳು + ಅಲ್ಲಿ. | 4. ಹರಿ + ಉತ + ಅದೆ. |
| 5. ಸಾಯ + ಉವ + ಆರು. | 6. ಅಣ್ಣ + ಅಂದಿರು + ಇಗೆ. |
| 7. ಮಾತು + ಇಂದ. | 8. ಗುರು + ಗಳು + ಏ. |
| 9. ಬಿಡು + ಅನು. | 10. ಕೊಡು + ಇರಿ. |
| 11. ಹೇಳು + ಓಣ. | 12. ರಕ್ಷಿಸು + ಅಲಿ. |

**57.** ಪದಗಳು ಒಂದಕ್ಕೊಂದು ಸೇರುವಾಗಲೂ ಸಂಧಿಯಾಗುತ್ತದೆ. ಹೇಗೆಂದರೆ:

ಬೆಕ್ಕಿಗೆ ಕೋಪ ಬಂದಿತೆಂದರೆ ಕೂದಲು ನೆಟ್ಟಗಾಗುತ್ತದೆ.
ಇಲ್ಲಿ, ಬಂತು + ಎಂದರೆ = ಬಂತೆಂದರೆ. ಯಾವ ಸಂಧಿ ? (ಲೋಪ)
ನೆಟ್ಟಗೆ + ಆಗುತ್ತದೆ = ನೆಟ್ಟಗಾಗುತ್ತದೆ (ಲೋಪ).
ಇವನಿಗೆ ಬುದ್ಧಿಯಿಲ್ಲ. ಬುದ್ಧಿ + ಇಲ್ಲ (ಯಕಾರಾಗಮ).

## ಅಭ್ಯಾಸ 59

ಇಲ್ಲಿರುವ ಸಂಧಿಗಳು ಯಾವುವು? ಎರಡು ಪದಗಳು ಸೇರಿವೆಯೋ? ಪ್ರಕೃತಿ ಪ್ರತ್ಯಯಗಳು ಕೂಡಿವೆಯೋ?

1. ವಾಯುವಿಗೆ. 2. ಅಡ್ಡಡ್ಡಲಾಗಿ. 3. ನೆಲದೊಳಕ್ಕೆ. 4. ನಾಲ್ಕಾರು. 5. ತಂಬಿಗೆಯಲ್ಲಿದ್ದ. 6. ಬದಿಯಲ್ಲಿ. 7. ಹೂವಿನಲ್ಲಿ. 8. ನನಗೇನೂ. 9. ಶಿರವನೊಡ್ಡಲು. 10. ದುಷ್ಟಾತ್ಮರಾದವರ. 11. ಎಲ್ಲೆಲ್ಲಿದೆ. 12. ರಾಮನಾಜ್ಞೆ. 13. ಕಪ್ಪೆಗಳೆಗೆಲ್ಲ. 14. ಹೆಸರನ್ನು. 15. ಗೋಳಾಡಿತು. 16. ಕೊಡುವರು. 17. ಭಾವಂದಿರು. 18. ಮಾವಿನೆಲೆ. 19. ಬ್ರಾಹ್ಮಣಿತಿ. 20. ಹೊಲಗೇರಿಯಲ್ಲಿ. 21. ಅವನಿಗೋಸ್ಕರ. 22. ಕಾವಿನಿಂದ. 23. ನಗೆಗೀಡು. 24. ನಾಚಿಕೆಗೇಡು. 25. ಸೇರುತ್ತದೆಯೇ?

## ಅಭ್ಯಾಸ 60

ಇವುಗಳನ್ನು ಸಂಧಿಮಾಡಿ ಬರೆಯಿರಿ:

1. ಕುರಿ + ಅನ್ನು. 2. ಇತ್ತ + ಇತ್ತ. 3. ಒಂದು + ಅಕ್ಷರ. 4. ಕಲ್ಲು + ಇಂದ. 5. ಮಗು + ಇಗೆ. 6. ಏನು + ಎಂದರೆ. 7. ಗಟ್ಟಿ + ಆದ. 8. ತಿಳಿ + ಕನ್ನಡ. 9. ನಡು + ಅಡವಿ. 10. ಕಿರು + ಕೂಸು. 11. ಸುತ್ತು + ಕೆಲಸ. 12. ಬಳಿಯಲ್ಲಿ + ಇದ್ದಾರೆ. 13. ಅನೇಕರು + ಉಂಟು. 14. ಭೂಮಿಯನ್ನು + ಆದರೂ. 15. ಸಂಧಿ + ಆಗುವುದು. 16. ಎಂಬ + ಆತನಲ್ಲಿ. 17. ಪ್ರಾಣ + ಏ. 18. ಇಲ್ಲ + ಅಲ್ಲ 19. ಅತ್ತ + ಆಗಿ. 20. ಗಂಗೆ + ತೊಗಲು. 21. ಆಕಾಶ + ಪುಟ್ಟಿ.

# ಅಧ್ಯಾಯ 8

(ಮಿಶ್ರೋದಾಹರಣೆಗಳು.)

## ಅಭ್ಯಾಸ 61

ಈ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯೆ—ಇವುಗಳನ್ನು ಕಂಡುಹಿಡಿಯಿರಿ:

1. ನೆಪೋಲಿಯನ್ ಎಂಬಾತನನ್ನು ಒಂದು ದ್ವೀಪಕ್ಕೆ ಕಳುಹಿಸಿದರು. 2. ನಿನಗೆ ಹಾಲು ಸೇರುತ್ತದೆಯೆ? 3. ನಾನು ಈ ಬೆಳಗ್ಗೆ ಒಂದು ವರ್ತಮಾನ ಕೇಳಿದೆ. 4. ನಿನಗೆ ಏನೂ ತಿಳಿಯದು. ೫. ಕೋಟೆಯಲ್ಲಿ ಬೆಳಕಿಲ್ಲ. 5. ಈ ರಾಜಕುಮಾರನು ಒಬ್ಬ ನಾಗಕನ್ಯಕೆಯನ್ನು ಮದುವೆಯಾದನು. 6. ನೀನು ಈ ಹುಡುಗಿಯನ್ನು ಬಲ್ಲೆಯ? 7. ಆ ಪುಟ್ಟ ಗಡಿಯಾರವನ್ನು ಎಲ್ಲಿ ಕಂಡೆ? 8. ಕವಿಗಳು ಚಂದ್ರನನ್ನು ಬಗೆಬಗೆಯಾಗಿ ವರ್ಣಿಸುತ್ತಾರೆ. 9. ಬೆಳಗ್ಗೆ ಏನು ಮಾಡೋಣ? 10. ದೇವರು ನಿಮ್ಮನ್ನು ಕಾಪಾಡಲಿ. 11. ನಿಮ್ಮ ಆಳನ್ನು ಕರೆಯಲೋ? 12. ಯುದ್ಧದಿಂದ ಅನೇಕರಿಗೆ ಕೇಡಾಗುತ್ತದೆ. 13. ಸುಮ್ಮನೆ ದುಡ್ಡನ್ನು ಕಳೆಯುತ್ತೀಯ? 14. ಈ ಮಾವಿನ ಹಣ್ಣು ಹುಳಿಯಾಗಿದೆ. 15. ತೆಂಗಿನ ಗಿಡಕ್ಕೆ ಎಲೆಗಳಿವೆಯೋ?

## ಅಭ್ಯಾಸ 62

ಈ ಕಥೆಯಲ್ಲಿರುವ ವಾಕ್ಯಗಳಲ್ಲಿ ಕರ್ತೃ, ಕರ್ತೃವಿಶೇಷಣ, ಕರ್ಮ, ಕರ್ಮ ವಿಶೇಷಣ, ಕ್ರಿಯೆ, ಕ್ರಿಯಾವಿಶೇಷಣ—ಇವುಗಳನ್ನು ಬಿಡಿಸಿ ತೋರಿಸಿ ಕ್ರಿಯೆಯಲ್ಲಿ ಅನ್ವಯಿಸುವ[1] ಪದಗಳನ್ನೆಲ್ಲಾ ಕ್ರಿಯಾವಿಶೇಷಣದ ಕೆಳಗೆ ಬರೆಯಿರಿ:

ಕಾಶಿಯಲ್ಲಿ ಒಬ್ಬ ವಿದ್ವಾಂಸನಿದ್ದನು. ಅವನಿಗೆ ಇಬ್ಬರು ಮಕ್ಕಳಿದ್ದರು. ಆತನು ಹಿರಿಯವನಿಗೆ ತನ್ನ ಆಸ್ತಿಯನ್ನೆಲ್ಲಾ ಕೊಟ್ಟನು; ಕಿರಿಯವನಿಗೆ ಚೆನ್ನಾಗಿ ವಿದ್ಯೆಯನ್ನು ಕಲಿಸಿದನು. ಕೆಲವು ದಿನಗಳಲ್ಲಿ ಹಿರಿಯ ಮಗನು ಆಸ್ತಿಯನ್ನು ಪೂರ ಕಳೆದನು; ಕಿರಿಯವನು ಬಹಳ ಹಣವನ್ನು ಸಂಪಾದಿಸಿದನು. ಅವನು ಬಹಳ ಒಳ್ಳೆಯ ಹೆಸರನ್ನು ಪಡೆದನು. ಹೀಗೆ ವಿದ್ಯೆಯಿಂದ ಬಹಳ ಪ್ರಯೋಜನವುಂಟು.

## ಅಭ್ಯಾಸ 63

೬೧ ನೆಯ ಅಭ್ಯಾಸದಲ್ಲಿ ನಾಮಪದ, ಕ್ರಿಯಾಪದ, ಅವ್ಯಯ–ಇವುಗಳನ್ನು ಗೊತ್ತುಮಾಡಿ.

## ಅಭ್ಯಾಸ 64

ಇವುಗಳಿಗೆ ತಕ್ಕ ಕರ್ತೃಗಳನ್ನು ಸೇರಿಸಿ:

[2]1. ಮಧುರೆಯಲ್ಲಿ ವಾಸಮಾಡುತ್ತಿದ್ದನು. 2. ದೇವಕಿಯನ್ನು ಮದುವೆಯಾದನು. 3. ಕಂಸನನ್ನು ಕೊಂದನು. 4. ಗೋಕುಲದಲ್ಲಿ ಇದ್ದನು. 5. ಬಲರಾಮನ ತಮ್ಮನು. 6. ರುಕ್ಮಿಣಿಯನ್ನು ಮದುವೆಯಾದನು. 7. ಕಾಡಿನಲ್ಲಿ ಹೋಗುತ್ತಿದ್ದರು. 8. ಬಂತು. 9. ಮರವನ್ನೇರಿದನು. 10. ಸತ್ತವನ ಹಾಗೆ ಮಲಗಿದನು. 11. ಅವನನ್ನು ಮೂಸಿತು. 12. ಬಂದು ತಲಪಿತು.

## ಅಭ್ಯಾಸ 65

ಇವುಗಳಿಗೆ ತಕ್ಕ ಕರ್ಮಗಳನ್ನು ಜೋಡಿಸಿ:

1. ಕವಾಡಿಗನು ಮಾರುತ್ತಾನೆ. 2. ಅಗಸನು ಒಗೆಯುತ್ತಾನೆ. 3. ಕಮ್ಮಾರನು ಮಾಡುತ್ತಾನೆ. 4. ಕುಂಬಾರನು ಮಾಡುತ್ತಾನೆ. 5. ಚಿಪ್ಪಿಗನು ಹೊಲಿದನು. 6. ಬೆಕ್ಕು ತಿಂದಿತು. 7. ಹುಡುಗನು ಚೆಲ್ಲಿದನು. 8. ಕುರುಡನು ಎಡವಿದನು. 9. ರಾಮನು ಸುರಕ್ಷಿತವಾಗಿ ಆಳಿದನು. 10. ಅವನಿಗೆ ಕೊಡು. 11. ದೊರೆಯು ಮಂತ್ರಿಯಾಗಿ ಮಾಡಿದನು. 12. ಕಾಡು ಜನರು ಹಿಡಿದರು. 13. ನೀನು ಎಂದಿಗೂ ಮರೆಯುವವನಲ್ಲ. 14. ಶತ್ರುಗಳು ಸೂರೆ ಮಾಡಿದರು. 15. ಸುಡುಗಾಡು ಸಿದ್ದನು ಮರುಳು ಮಾಡಿದನು. 16. ಆತನು ಹುಡುಗರಿಗಾಗಿ

[1] "ಕಾರಕ" ಎಂಬ ಮಾತನ್ನು ಹುಡುಗರಿಗೆ ಈಗ ತಿಳಿಸಬೇಕಾದುದಿಲ್ಲ.

[2] ಉಪಾಧ್ಯಾಯರು ಹುಡುಗರಿಗೆ ಇದರ ಸಂಬಂಧವಾದ ಕಥೆಯನ್ನು ಮೊದಲೇ ತಿಳಿಸಿರಬೇಕು.

ಬರೆಯುತ್ತಾನೆ. 17. ಕಪಿನಾಯಕರು ಕಟ್ಟಿದರು. 18. ಆಳು ತಂದನು. 19. ತಾನು ಮಾಡಲಿ. 20. ಸಾಹುಕಾರನು ಪಾಠಶಾಲೆಗೆ ಕಳುಹಿಸಿದನು.

## ಅಭ್ಯಾಸ 66

ಇವುಗಳಿಗೆ ತಕ್ಕ ಕ್ರಿಯೆಗಳನ್ನು ಜೋಡಿಸಿರಿ:

1. ಒಬ್ಬ ಸಿಪಾಯಿಗೆ ಆಫ್ಘಾನ ಯುದ್ಧದಲ್ಲಿ ಒಂದು ಕಾಲು..... 2. ಅವನು ಒಂದು ಮರದ ಕಾಲನ್ನು.... 3. ಸೈನ್ಯದ ವೈದ್ಯನು ಅವನಿಗೆ ಅದನ್ನು... 4. ಒಂದು ದಿನ ಅವನು ಪೆನ್ಷನ್ ತರುವುದಕ್ಕೆ ಕಚೇರಿಗೆ..... 5. ದಾರಿಯಲ್ಲಿ ಒಂದು ಮೋಟಾರ್ ಗಾಡಿ...... 6. ಗಾಡಿ ಅವನ ಮರದ ಕಾಲಿನಮೇಲೆ..... 7. ಕಾಲು ... 8. ಯಜಮಾನನು 'ಇವನನ್ನು ಗಾಡಿಯ ಮೇಲೆ ... ಆಸ್ಪತ್ರೆಗೆ' ... ಎಂದನು. 9. ಸಿಪಾಯಿ 'ನನಗೇನೂ...; ಒಬ್ಬ ಬಡಗಿ ಮಾತ್ರ...' ಎಂದನು.

## ಅಭ್ಯಾಸ 67

ಈ ವಾಕ್ಯಗಳಲ್ಲಿರುವ ನಾಮಪದಗಳ ವಚನವನ್ನು ಸಾಧ್ಯವಾದ ಕಡೆ ಬೇರೆ ಮಾಡಿ ಬರೆಯಿರಿ:

1. ನನ್ನ ಬಾಲ ಹೋಯಿತು. 2. ನಾನು ಏನು ಮಾಡಲಿ? 3. ನರಿಗಳು ನಗುತ್ತವೆ. 4. ಅದು ಮರದ ಕೆಳಗೆ ಕೂತಿತು. 5. ನಮ್ಮ ಬಾಲಗಳಿಂದ ಏನು ಪ್ರಯೋಜನ? 6. ನೀವು ಒಂದು ಕಥೆಯನ್ನು ಕೇಳಿ. 7. ರಾಮನ ವಸ್ತ್ರವನ್ನು ಯಾವನೋ ಕದ್ದನು. 8. ಕುದುರೆ ಬಹು ಒಳ್ಳೆಯ ಪ್ರಾಣಿ. 9. ಇವನು ದೆವ್ವಗಳನ್ನು ನಂಬುತ್ತಾನೆ. 10. ನಿನ್ನ ಮಾತು ಸರಿಯಾಗಿದೆ. 11. ಕೋಗಿಲೆಯು ವಸಂತದಲ್ಲಿ ಕೂಗುತ್ತದೆ. 12. ಕತ್ತೆಯು ಭಾರವನ್ನು ಹೊರುತ್ತದೆ. 13. ಆ ಚಿಪ್ಪಿಗನ ಹತ್ತಿರ ಹರಿತವಾದ ಕತ್ತರಿಗಳಿವೆ. 14. ನಮ್ಮ ಭಾವಂದಿರೂ ಮಾವಂದಿರೂ ಜಗಳವಾಡುತ್ತಾರೆ. 15. ತಿರುಕನಿಗೇತಕ್ಕೆ ಇಷ್ಟು ಗರ್ವ? 16. ಕಮ್ಮಾರನು ಇಕ್ಕಳವನ್ನು ಮಾಡಿದನು.

## ಅಭ್ಯಾಸ 68

ಈ ವಾಕ್ಯಗಳಲ್ಲಿ ನಾಮಪದಗಳ ಅನ್ವಯವೇನು?

1. ಅವನ ಕಿವಿಗೆ ಕೋಗಿಲೆಯ ಧ್ವನಿಕೇಳಿಸಿತು. 2. ರಾಮನ ತಂಗಿಯು ಒಂದು ಕುಲಾವಿಯನ್ನು ಹೆಣೆಯುವಳು. 3. ನಿನ್ನಿಂದ ಮನೆ ಮಾರಿತು. 4. ಕುರುಬನು ನಿಮ್ಮ ಚಿಕ್ಕಪ್ಪನೋ? 5. ಹೇಡಿಯ ಕೈಯಲ್ಲಿ ಚಂದ್ರಾಯುಧವಿದ್ದರೇನು? 6. ಈತನು ವಿರಕ್ತ ಮಠಕ್ಕೆ ಅಧ್ಯಕ್ಷನಾಗಿದ್ದನು. 7. ಮಾತು ಬಲ್ಲವನಿಗೆ ಜಗಳವಿಲ್ಲ. 8. ದುಡ್ಡಿಗೆ ಎರಡು ಬಾಳೇಹಣ್ಣು ಕೊಡುತ್ತಾರೆ. 9. ಕಾಶಿಯಲ್ಲಿ ಒಬ್ಬ ವಿದ್ವಾಂಸನಿದ್ದನು. 10. ಆತನಿಗೆ ಇಬ್ಬರು ಮಕ್ಕಳಿದ್ದರು. 11. ಆತನು ದೊಡ್ಡ ಮಗನಿಗೆ ಆಸ್ತಿಯನ್ನು ಕೊಟ್ಟನು. 12. ಅವನು ಕೆಲವು ದಿನಗಳಲ್ಲಿ ಆಸ್ತಿಯನ್ನು ವೆಚ್ಚ ಮಾಡಿದನು.

## ಅಭ್ಯಾಸ 69

ಈ ವಾಕ್ಯಗಳಲ್ಲಿ ಉತ್ತರವಿಶೇಷಣಗಳನ್ನು ಪೂರ್ವವಿಶೇಷಣಗಳಾಗಿಯೂ ಪೂರ್ವವಿಶೇಷಣಗಳನ್ನು ಉತ್ತರವಿಶೇಷಣಗಳಾಗಿಯೂ ಮಾಡಿರಿ.

1. ಇದು ಕರಿಯ ನಾಯಿ. 2. ಇದನ್ನು ಬೆಳ್ಳಗೆ ಮಾಡುತ್ತೀಯ? 3. ಇದು ಅಸಾಧ್ಯವಾದ ಕೆಲಸ. 4. ಬೇವಿನ ಹಣ್ಣು ಕಹಿ. 5. ಅವನಿಗೆ ಬಹಳ ಐಶ್ವರ್ಯವಿದೆ. 6. ಇನ್ನು ಬೇರೆ ಬಹುಮಾನ ಬೇಕೆ? 7. ಹುಡುಗರಿಗೆ ಒಳ್ಳೆಯ ಬುದ್ಧಿ ಇದೆ. 8. ಒಂದು ದಿನಕ್ಕೆ ಆರಾಣೆ ಕೂಲಿ. 9. ಇಬ್ಬರು ಕಳ್ಳರು ಓಡಿದರು. 10. ಎಲ್ಲಾ ಜನರೂ ಗೋಳಿಟ್ಟರು.

## ಅಭ್ಯಾಸ 70

ಇಲ್ಲಿ ಬಿಟ್ಟಿರುವ ಕಡೆ ತಕ್ಕ ವಿಶೇಷಣಗಳನ್ನು ಜೋಡಿಸಿ:

1. ಕತ್ತೆ ಬಹಳ...ಪ್ರಾಣಿ. ಅದು ಕುದುರೆಗಿಂತ ಆಕಾರದಲ್ಲಿ...ವೇಗದಲ್ಲಿ...; ಚಟುವಟಿಕೆಯಲ್ಲಿ...; ಕೆಲಸದಲ್ಲಿ...; ಬುದ್ಧಿಯಲ್ಲಿ... 2. ಕತ್ತೆಗೆ ಕಿವಿ...; ಕೂದಲು...; ಬೆನ್ನಿನ ಮೇಲೆ ಮಧ್ಯದಲ್ಲಿ ಉದಕ್ಕೂ...ಪಟ್ಟೆ ಇರುತ್ತದೆ. 3. ಬತ್ತದ ಗದ್ದೆ...ಕಾಣುತ್ತದೆ. 4. ಇನ್ನು ......ಕಾಲದಲ್ಲಿ ಪೈರು ಬಲಿಯುತ್ತದೆ. 5. ಗದ್ದೆಗೆ ... ನೀರು ಬೇಕು. 6. ಬಂಗಾರವು ಬೆಳ್ಳಿಗಿಂತ.... 7. ಈ ಬೆಕ್ಕು ಎಷ್ಟು.......!

## ಅಭ್ಯಾಸ 71

ಈ ವಾಕ್ಯಗಳನ್ನು ಉಳಿದ ಎರಡು ಕಾಲಗಳನ್ನು ಸೂಚಿಸುವಂತೆ ಬರೆಯಿರಿ:

1. ಅವನ ಹತ್ತಿರ ಒಂದು ಕತ್ತೆ ಇತ್ತು. 2. ಹಾಲಿನಿಂದ ಮೊಸರಾಗುತ್ತದೆ. 3. ಅಗಸನು ಬಟ್ಟೆಗಳನ್ನು ತರುವನು. 4. ನಿಮ್ಮ ಹುಡುಗನು ಓದುತ್ತಾನೆ. 5. ನಿನಗೆ ಇದನ್ನು ಯಾರು ಕಳುಹಿಸಿದರು? 6. ಇದಕ್ಕೆ ರಾಮನು ಒಪ್ಪಿದನು. 7. ನಮ್ಮ ಮನೆಗೆ ಯಾರೋ ಊಟಕ್ಕೆ ಬರುವರು. 8. ಕುದುರೆಯ ನೆರಳಿಗೂ ಬಾಡಿಗೆ ಉಂಟೆ? 9. ತುತೂರಿಯವನನ್ನು ಶತ್ರುಗಳು ಹಿಡಿದರು. 10. ನಾನು ನೀರು ಕಲಕಿದೆನೆ? 11. ಅವರು ನಾಳೆ ಬರುವರು. 12. ನಿನಗೆ ಅಡ್ಡ ಬೀಳುತ್ತೇನೆ. 13. ಹುಡುಗರೆಲ್ಲ ಅವನ ಮೇಲೆ ತಪ್ಪು ಹೊರಿಸಿದರು. 14. ಹುಡುಗರಿಬ್ಬರೂ ಆಡುತ್ತಾರೆ. ೧೫. ಅವರನ್ನು ಹೊಡೆಯುತ್ತೇನೆ.

## ಅಭ್ಯಾಸ 72

ಇಲ್ಲಿರುವ ಕ್ರಿಯಪದಗಳ ರೂಪಗಳು ಯಾವ ಅರ್ಥವನ್ನು ಹೇಳುತ್ತವೆ? ಅದಕ್ಕೆ ವ್ಯಾಕರಣದ ಹೆಸರೇನು?

1. ಹೂತಿರುವ ಚಕ್ರ ಸುಮ್ಮನೆ ಮೇಲಕ್ಕೆ ಎದ್ದೀತೆ? 2. ಹೆಗಲನ್ನು ಕೊಡು; ಮೇಲಕ್ಕೆ ಎತ್ತು. 3. ನನ್ನ ಶರೀರವು ನಿನ್ನ ಒಂದು ದವಡೆಗೆ ಸಾಲದು. 4. ಎಲ್ಲಿ, ನೋಡೋಣ! ಹಿಡಿ! 5. ಅಯ್ಯ, ನನ್ನನ್ನು ಬಿಡು. 6. ಅವನನ್ನು ಎಂದಿಗೂ ಬಿಡೆನು. 7. ಮಾತಿಗೆ ತಪ್ಪಲಾರೆ. 8. ಈ ವರ್ಷ ಕೆರೆ ತುಂಬಿತೆ? 9. ಅಲ್ಲಿಗೆ ಎಷ್ಟು ಜನ ಬಂದಾರೋ ಕಾಣೆ. 10. ಇನ್ನಾದರೂ

ಸುಮ್ಮನಿರು; ಕೆಲಸ ನಡೆಯಲಿ. 11. ನಾನೂ ಹಿಂದಿನಿಂದ ಬಂದೇನಂತೆ. 12. ನನ್ನಿಂದ ನಿನಗೇನು ಸಿಕ್ಕೀತು; ಹೋಗು, ಹೋಗು!

## ಅಭ್ಯಾಸ 73

ಈ ಕೆಳಗಣ ವಾಕ್ಯಗಳಲ್ಲಿರುವ ಅವ್ಯಯಗಳನ್ನು ತೋರಿಸಿ ಅವುಗಳ ಅನ್ವಯ ವನ್ನು ಹೇಳಿ:

1. ಈಚೆಗೆ ಅದರ ವಿಷಯಕ್ಕೆ ಜಗಳ ಹುಟ್ಟಿದೆ. 2. ನಿನ್ನ ಮಾತು ಸ್ವಲ್ಪವೂ ನಿಜವಲ್ಲ. 3. ನೀನು ಆನೆಯ ಹಾಗೆ ಮೆಲ್ಲಗೆ ನಡೆಯುತ್ತೀಯೆ. 4. ಯಾವ ಕೆಲಸಕ್ಕೂ ಧುಡುಮ್ಮನೆ ನುಗ್ಗುತ್ತಾನೆ. 5. ಓಹೋ! ಈಗ ನಿನ್ನಾಟ ತಿಳಿಯಿತು. 6. ಆಮೇಲೆ ಏನಾಯಿತು. 7. ನೆಟ್ಟಗೆ ಅವನ ಮನೆಗೆ ಹೋಗು. 8. ಸುಮ್ಮನೆ ಕೊಡುತ್ತಾನೊ ಇಲ್ಲವೊ? 9. ಅಂತೂ ಇಂತೂ ಕುಂತೀಮಕ್ಕಳಿಗೆ ರಾಜ್ಯವಿಲ್ಲ. 10. ಇದಕ್ಕೆ ಮುಂಚೆ ನೀವೆಲ್ಲಿ ಇದ್ದಿರಿ? 11. ಬಳಿಕ ರಾಮನು ಕೃಷ್ಣನಿಗೆ ಹೀಗೆ ಹೇಳಿದನು. 12. ಕೂಡಲೆ ಗಾಡಿಯವನು ಬಾಡಿಗೆ ಕೇಳಿದನು. 13. ತೆಪ್ಪನೆ ಕೂತುಕೊ. 14. ಏನಾದರೂ ಲೊಟಲೊಟನೆ ಮಾತಾಡುತ್ತಾನೆ. 15. ನೀನು ಎಷ್ಟು ಮೆಲ್ಲಗೆ ಹೋಗುತ್ತಿ! 16. ಮತ್ತೆಲ್ಲಿ ಹೋಗಲಿ?

## ಅಭ್ಯಾಸ 74

ಇಲ್ಲಿ ಬಿಟ್ಟಿರುವ ಮಾತನ್ನು ಅಥವಾ ಮಾತುಗಳನ್ನು ಸೇರಿಸಿ ಅವು ಯಾವ ಪದ ವೆಂಬುದನ್ನು ತಿಳಿಸಿ:

### ಗೂಳಿ, ಹೋತ.

1. ಒಂದಾನೊಂದು...ಒಂದು ಗೂಳಿಯನ್ನು ಬೆನ್ನಟ್ಟಿ... 2. ಗೂಳಿ ಒಂದು ... ಹೋಯಿತು. 3. ಅಲ್ಲಿ ಒಂದು ಹೋತವು...ಕೋಡಿನಿಂದ... 4. ಆ ... "ನಿನಗೆ ... ಹೆದರು ತ್ತೇನೆಯೆ? ಆ ಸಿಂಹ ಕಣ್ಣು ಮರೆಯಾಗಲಿ. ಗೂಳಿ ಹೆಚ್ಚೊ ಹೋತ...ತೋರಿಸುವೆನು" ಎಂದಿತು.

### ಕೃಷ್ಣನೂ ಕುಚೇಲನೂ.

1. ಪೂರ್ವದಲ್ಲಿ...ಒಬ್ಬ ಬ್ರಾಹ್ಮಣನಿದ್ದನು. 2. ಅವನು...ಬಡವನು. 3. ಇವನಿಗೆ ಕೃಷ್ಣನೆಂಬ ಒಬ್ಬ...ಇದ್ದನು. 4. ಇವರಿಬ್ಬರೂ ಸಾಂದೀಪರೆಂಬ ಗುರುಗಳಲ್ಲಿ... 5. ಕೃಷ್ಣನು ದ್ವಾರಕೆಯಲ್ಲಿ.... 6. ಕುಚೇಲನ ಹೆಂಡತಿಯು...... ಕೃಷ್ಣನ ಬಳಿಗೆ.... 7. ಕುಚೇಲನು ... ಅರಮನೆಯಲ್ಲಿ......ಕೆಲವು ದಿವಸಗಳನ್ನು.... 8. ಕೃಷ್ಣನು ಅವನಿಗೆ ಆದರ...... 9. ಮುಂದೆ...ಕುಚೇಲನಿಗೆ ಉಪಕಾರವಾಯಿತು. 10. ಅವನ...ಹೋಯಿತು. 11. ಕುಚೇಲ ನೆಂದರೆ...ಬಟ್ಟೆಯವನು. 12. ಅವನಿಗೆ ಈ ಹೆಸರು...ಸುಧಾಮನೆಂಬ...ಬಂತು.

## ಅಭ್ಯಾಸ 75

[3]ಈ ಕೆಳಗಣ ಮಾತುಗಳನ್ನುಪಯೋಗಿಸಿ ವಾಕ್ಯಗಳನ್ನು ಮಾಡಿ:

### ಕುದುರೆ.

ಕಾಲು, ಬಾಲ, ಕೂದಲು, ಓಡುತ್ತದೆ, ಕುತ್ತಿಗೆ, ಕಿವಿಗಳು, ವಾಸನೆ, ಕೇಳು, ಗೊರಸುಗಳು, ಲಾಳ, ಉಕ್ಕು, ಗಟ್ಟಿ, ಸವಾರಿ, ಎಳೆ, ಗಾಡಿ, ಸಾಧು.

### ಗಿಣಿ.

ಹಸುರು, ರೆಕ್ಕೆಗಳು, ಗರಿಗಳು, ಬಾಲ, ಕೊಕ್ಕು, ನಾಲಿಗೆ, ಮಾತಾಡು, ಹಣ್ಣು ಗಳು, ಪಂಜರ, ಸಾಕು.

### ನೀರು.

ಆವಿ, ಮಳೆ, ಮೋಡ, ನದಿ, ಸಮುದ್ರ, ಸೂರ್ಯ, ಬೇಸಗೆ, ಮಳೆಗಾಲ, ಚಳಿ ಗಾಲ, ಮಂಜು, ಇಬ್ಬನಿ.

### ಪೋಲೀಸಿನವನು.

ಊರು, ಕಳ್ಳರು, ಮನೆ, ಲಾಂದ್ರ, ಸೊಂಟಪಟ್ಟೆ, ದೊಣ್ಣೆ, ಅಂಗಿ, ಕೆಂಪು, ರುಮಾಲು, ಕಪ್ಪು, ನಂಬರು, ರಾತ್ರೆ.

## ಅಭ್ಯಾಸ 76

ಈ ಕೆಳಗಣ ಮಾದರಿಯನ್ನು ನೋಡಿ ಅದರಂತೆ ೭೩ ನೆಯ ಅಭ್ಯಾಸದಲ್ಲಿರುವ ವಾಕ್ಯಗಳಿಗೆ ಪದವಿವರಣೆಯನ್ನು ಮಾಡಿ:

ಉದಾ: ಆಗ ಆತನ ಹುಡುಗಿಗೆ ಬಲವಾದ ಏಟು ಬಿತ್ತು.

ಆಗ—ಅವ್ಯಯ. 'ಬಿತ್ತು' ಎಂಬ ಕ್ರಿಯಾಪದದಲ್ಲಿ ಅನ್ವಯಿಸುತ್ತದೆ.
ಆತನ—ನಾಮಪದ, ಪುಲ್ಲಿಂಗ, ಷಷ್ಠೀವಿಭಕ್ತಿ, ಏಕವಚನ,—'ಹುಡುಗ' ಎಂಬುದಕ್ಕೆ ವಿಶೇಷಣ.
ಹುಡುಗಿಗೆ—ನಾಮಪದ, ಸ್ತ್ರೀಲಿಂಗ, ಚತುರ್ಥೀವಿಭಕ್ತಿ, ಏಕವಚನ 'ಬಿತ್ತು' ಎಂಬ ಕ್ರಿಯಾಪದದಲ್ಲಿ ಅನ್ವಯಿಸುತ್ತದೆ.
ಬಲವಾದ—ನಾಮಪದ,—'ಏಟು' ಎಂಬುದಕ್ಕೆ ವಿಶೇಷಣ.

---

[3]ಹೀಗೆಯೇ ಒಂದೊಂದು ವಿಷಯದಲ್ಲಿ ಕೆಲವು ಮಾತುಗಳನ್ನು ಕೊಟ್ಟು ವಾಕ್ಯವನ್ನು ಬರೆಯುವಂತೆ ಮಾಡಬಹುದು. ಸಣ್ಣ ಸಣ್ಣ ವಾಕ್ಯಗಳನ್ನು ಬರೆಸಬೇಕು.

ಏಟು—ನಾಮಪದ, ನಪುಂಸಕಲಿಂಗ, ಪ್ರಥಮಾವಿಭಕ್ತಿ, ಏಕವಚನ 'ಬಿತ್ತು' ಎಂಬುದರಲ್ಲಿ ಅನ್ವಯಿಸುತ್ತದೆ.

ಬಿತ್ತು—ಕ್ರಿಯಾಪದ, ಭೂತಕಾಲ, ಮಧ್ಯಮಪುರುಷ, ನಪುಂಸಕಲಿಂಗ ಏಕವಚನ,—'ಏಟು' ಎಂಬ ಕರ್ತೃವಿನ ಕ್ರಿಯಾಪದ.

## ಅಭ್ಯಾಸ 77

ಇವುಗಳಲ್ಲಿ ವಾಕ್ಯಗಳು ಯಾವುವು? ಯಾವುವು ವಾಕ್ಯಗಳಲ್ಲ? ಅಲ್ಲದವುಗಳಿಗೆ ತಕ್ಕ ಮಾತುಗಳನ್ನು ಸೇರಿಸಿ ವಾಕ್ಯಗಳನ್ನಾಗಿ ಮಾಡಿ:

1. ಕುದುರೆ ಒದೆಯುತ್ತದೆ. 2. ನಿಲ್ಲು. 3. ಮನೆಯತನಕ. 4. ದಿನಕ್ಕೆರಡು ಸಲ. 5. ಸಿಂಹ ಗರ್ಜಿಸುತ್ತದೆ. 6. ಇತ್ತಿತ್ತಲಾಗಿ. 7. ಮನೆಯ ಸುತ್ತಲೂ ಸಿಪಾಯಿಗಳು ಯುದ್ಧ ಮಾಡುತ್ತಾರೆ. 8. ತಿಂಗಳ ಕೆಳಗೆ. 9. ತಲೆಕೆಳಗಾಗಿ. 10. ಮಂಗಗಳು ಕಿಚಗುಟ್ಟುತ್ತವೆ. 11. ಕೆಟ್ಟವರ ಜತೆಗೆ. 12. ಮೂರನೆಯ ವರ್ಷ. 13. ಯಾವಾಗಲಾದರೂ ಇತ್ತ ಬಾ. 14. ಯಾರೋ ಒಬ್ಬನು. 15. ನಿಮ್ಮ ಅಕ್ಕನ ಮಾವನ ಸೋದರಳಿಯನು ಒಂದನೆಯ ತರಗತಿಯ ಇಪ್ಪತ್ತುಮೂರನೆಯ ಹುಡುಗನು. 16. ಎರಡು ವರ್ಷಗಳ ಮೇಲೆ. 17. ಓದುವವನು ಜಾಣ. 18. ಮಂಗಳಧ್ವನಿಯಾಯಿತು.